Reg. No. M. 1550.

"if not delivered please return to "KODAGU" OFFICE MERCARA

ಕೊಡಗು.

ಸತ್ಯೇನ ಭೂತದಯಯಾಽಽ ವಿದ್ಯಾ ವೀರೇ ಪಾಂಡಿತ್ಯಕಾ / ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ನೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೨೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಜನವರಿ ತಾರೀಕು ೨೦ನೇ ಶುಕ್ರವಾರ. | ಸಂಖ್ಯೆ ೩೩

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws cut-ruby ear-rings, etc., etc., etc., in all prices. Very attractive Prices most moderate.

Estimates free on enquiry.

Telegrams: 'PRECIOUS.'

CATALOGUE ON ENQUIRY.

Designs free on enquiry.

Telephone: 3145.

V. Subramaniyer
Jeweller,

52–8 Post Box 423, Triplicane, P. O., MADRAS.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಿಂಗಳೂರು.

52–19

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜವಿರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಜೀವನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಸೌಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—38

ಕೊಡಗು.

ಸನ್ ೧೯೩೩ನೇ ಇಸವಿ

ಜನವರಿ ತಾ. ೨೦ನೇ ಶುಕ್ರವಾರ.

ಪ್ರಸ್ತಾವನೆ

ಜಾರಿಯಲ್ಲಿರುವ ವರಿವಿಗೆ

ನಾವು

ಪ್ರಕಟಿಸುವುದಿಲ್ಲ.

ದುಂಡುಮೇಜು ಪರಿಷತ್ತು.

ಮೂರನೇ ದುಂಡು ಮೇಜು ಪರಿಷತ್ತು ಮುಗಿದು ಪರಿಷತ್ತಿಗೆ ಕರೆಯಿಸಿಕೊಳ್ಳಲ್ಪಟ್ಟಿದ್ದ ಮಹನೀಯರುಗಳು ಹಿಂತಿರುಗಿ ಬಂದಿದ್ದಾರೆ. ಹಿಂದೂಸ್ಥಾನದ ಅಡಳಿತಪಲ್ಲಿ ಮಾಡುವ ಮೂರ್ಪಾಡುಗಳನ್ನೊಳಕೊಂಡ ಪ್ರಕಟಣಾ ಪತ್ರವೊಂದು ಶೀಘ್ರದಲ್ಲೇ ಬ್ರಿಟಿಷ್ ಸರಕಾರದಿಂದ ಪ್ರಕಟವಾಗಲಿಕ್ಕಿದೆ. ಅದು ಪ್ರಕಟವಾದ ಏನಹ ಸರಕಾರದ ಪತಶೀಲ್ ಮತಲಪ್ಪುಗಳು ತಿಳಿಯಲಾರವು. ಕಾಂಗ್ರೆಸ್ ಪ್ರತಿನಿಧಿಯನ್ನು ಕರೆಸಿಕೊಳ್ಳದ ದುಂಡು ಮೇಜು ಜರ್ಜೆಯಿಂದ ಪ್ರಯೋಜನವಾಗಲಾರದೆಂತ ಹಿಂದೀಯರಿಗೆ ತಿಳಿದಿತ್ತು. ದೇಶದ ಹೆಚ್ಚಿನ ಜನರ ಅಭಿಪ್ರಾಯವು ಹೀಗಿದ್ದರೂ ಮೋಡರೇಟ್ ಪಕ್ಷದ ಅಭಿಪ್ರಾಯವಿರುವ ಸರ್ ತೇಜ್‌ಬಹದೂರ್ ಸಪ್ರು ಮತ್ತು ಮೆ ಜಯಕರವರವರು ಪರಿಷತ್ತಿಗೆ ಹೋಗಿ ಬಂದರು. ಅವರಿಗೆ ತೋರಿದಂತೆ ಹಿಂದೂಸ್ಥಾನದ ಪಂವಾಗಿ ಹೋರಾಡಯೇ ಇರಬೇಕು. ಇವರುಗಳು ಮತ್ತು ಇತರ ವೆ೦ಬಂರವು ಏನೇನು ವಾದಿಸಿದರೆಂತ ದೇಶದವರು ತಿಳಿದುಕೊಳ್ಳಲು ಅನುಕೂಲವಿಲ್ಲದಾಗಿದೆ. ಯಾಕೆಂದರೆ ಈ ಸಾರಿಯ ಪರಿಷತ್ತಿನ ಚರ್ಚೆಯು ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ. ಇವರು ಮಾಡಿದ ಪ್ರಯತ್ನಗಳೆಲ್ಲವೂ ಸಫಲವಾಗದಿದ್ದರೂ ಈಗ ಕೊಡುವ ಸುಧಾರಣೆಗಳನ್ನು ಹಿಂದೀಯರು ಉಪಯೋಗಿಸಿಕೊಂಡು ಮುಂದಿನ ಸುಧಾರಣೆಯನ್ನು ಪಡೆದುಕೊಳ್ಳಬೇಕೆಂತ ಸರ್ ಸಪ್ರೂರವರು ಈ ವಾರ ಒಂದು ಭಾಷಣ ಮಾಡಿಯುತ್ತಾರೆ. ಆದರೆ ಬೊಂಬಾಯಿಯಲ್ಲಿ ಮೋಡರೇಟ್ ಪಕ್ಷದ ಮುಖಂಡರು ಮೂರು ದಿನಗಳ ವರೆಗೆ ಪರಿಷತ್ತಿನ ತೀರ್ಮಾನಗಳನ್ನು ಏನು ಶೋಸಿ ನೋಡಿ ಇವುಗಳಿಂದ ಹಿಂದುಸ್ಥಾನಕ್ಕೆ ತೃಪ್ತಿಯೂಗಲಿಕ್ಕಿಲ್ಲವೆಂತ ಕಂಠೋಕ್ತವಾಗಿ ಹೇಳಿದ್ದಾರೆ. ಮೋಡರೇಟ್ ಪಕ್ಷದವರಿಗೇನೇ ತೃಪ್ತಿಯೂಗದಿದ್ದರೆ ಕಾಂಗ್ರೆಸ್ ಪಕ್ಷದವಂಗೆ ತೃಪ್ತಿಯೂಗುವುದೆಂತು?

ಈಗ ತಿಳಿದು ಬಂದಿರುವಷ್ಟರಿಂದ ಫಡರೇಶನಿಗೆ ಸೇರಲು ರಾಜರುಗಳು ಒಪ್ಪಿದರೆ ಒಂದು ದ್ವಿಮುಖ ಸರಕಾರದ ಪದ್ಧತಿಯು ಸ್ಥಾಪನೆಯೂಗಬಹುದು. ಮಧ್ಯವರ್ತಿ ನ್ಯಾಯವಿಧಾಯಕ ಸಭೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೂಡಲೇ ಕೊಡುವಂತೆ ಕಾಡುಬರುವುದಿಲ್ಲ. ಬ್ರಿಟಿಷ್ ಜನರ ಹಣವು ಹಿಂದುಸ್ಥಾನದಲ್ಲಿ ತುಂಬಾ ಇರುವುದರಿಂದಲೂ ಸರಕಾರವು ಮೂಡಿರುವ ಸ್ವಲ್ಪ ವಾಯಿದೆಯ ಸಾಲವನ್ನು ತೀರಿಸುವ ಜವಾಬ್ದಾರಿಯನ್ನು ಸರಕಾರವು ವಹಿಸಿಕೊಳ್ಳಬೇಕಾಗಿರುವುದರಿಂದಲೂ ಮಧ್ಯವರ್ತಿ ನ್ಯಾಯವಿಧಾಯಕ ಸಭೆಗೆ ಆರ್ಥಿಕ ಸ್ವಾತಂತ್ರ್ಯ ತಕ್ಷಣ ಕೂಡಲಾಗುವುದಿಲ್ಲವಂತೆ! ಬ್ರಿಟಿಷ್ ಜನರ ಹಣವು ಹಿಂದುಸ್ಥಾನದಲ್ಲಿ ಇರುವ ಕಾರಣದಿಂದ ಎತ್ರ ಹಿಂದುಸ್ಥಾನಕ್ಕೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಡದಿರುವುದು ನ್ಯಾಯವಲ್ಲ. ಪ್ರಪಂಚದ ಎಲ್ಲಾ ಕಡೆಗಳಲ್ಲೂ ಬ್ರಿಟಿಷ್ ಹಣಗಾರರು ತಮ್ಮ ಹಣವನ್ನು ಹಾಕಿದ್ದಾರೆ. ಆದರೆ ಅಂಥಾ ಎಲ್ಲಾ ಪ್ರದೇಶಗಳಲ್ಲೂ ಸರಕಾರದ ಆದಾಯ ವೆಚ್ಚವು ಬ್ರಿಟಿಷ್ ಸರಕಾರದ ಕೈಯ್ಯಲ್ಲಿಲ್ಲ.

ಮಿಲಿಟರಿ ಇಲಾಖೆಗಾಗಿ 50 ಕೋಟಿ ರೂಪಾಯಿ ಖರ್ಚಾಗುವುದು ಹಿಂದುಸ್ಥಾನದ ಕ್ಷೇಮಕ್ಕಲ್ಲ. ಆ ದುಂದು ಖರ್ಚನ್ನು ಕಡಿಮೆ ಮಾಡಿ ಜನರ ಮೇಲೆ ಇರುವ ಸರಕಾರದ ತೆರಿಗೆಗಳೆಂಬ ಹೊರೆಯನ್ನು ಕಡಿಮೆ ಮಾಡಬೇಕೆಂತಲೂ, ಜನರ ಸಹಾಯಕ್ಕೆ ಬೇಕಾದ ಖರ್ಚುಗಳನ್ನು ಮಾಡಬೇಕೆಂತಲೂ ಹಿಂದೀಯರು ಕೇಳುತ್ತಿರುವುದಾಗಿದೆ. ಆದರೆ ಈ ಇಲಾಖೆಯ ಖರ್ಚನ್ನು ಮಧ್ಯವರ್ತಿ ನ್ಯಾಯವಿಧಾಯಕ ಸಭೆಯು ಮಂಜೂರಾತಿಗ ಇಡಲಾಗುವುದಿಲ್ಲವಂತೆ! ಈ ಇಲಾಖೆಯನ್ನು ನಡಿಸುವ ಜವಾಬ್ದಾರಿಯು ಬ್ರಿಟಿಷ್ ಸರಕಾರದ್ದೇ ಇರಬೇಕಂತೆ! ಹಿಂದೀಯಂತ್ರಿಯು ಈ ವೆಚ್ಚದ ಅಂದಾಜು ಪಟ್ಟಿ ನೋಡಿ ಸಲಹೆಕೊಡಬಹುದಂತೆ! ಹಿಂದುಸ್ಥಾನದ ಕ್ಷೇಮಕ್ಕಾಗಿ ಇರುವ ಭದ್ರತೆಗಳನ್ನು ಒಪ್ಪಿಕೊಳ್ಳಬಹುದಾದರೂ ಮಿಲಿಟರಿ ಇಲಾಖೆಗೆ ಆಗುವ ಖರ್ಚು ಹಿಂದೀ ಜನತಾಂಗದ ಪ್ರತಿನಿಧಿಗಳ ಅನುಮತಿಗೆ ಒಳಗಾಗಬಾರದೆಂತ ಇರುವುದು ಹಿಂದುಸ್ಥಾನದ ಕ್ಷೇಮಕ್ಕೆಂತ ಯಾರು ತಾನೇ ಒಪ್ಪಲು ಸಾಧ್ಯವಿದೆ?

ಪ್ರಾಂತ್ಯಗಳಲ್ಲಿ ಪ್ರಜಾಜವಾಬ್ದಾರಿ ಸರಕಾರವನ್ನು ಕೂಡಲೇ ಕೊಟ್ಟು ಅನೇಕ ವರ್ಷಗಳ ನಂತರ ಮಧ್ಯವರ್ತಿ ಸರಕಾರದಲ್ಲಿ ಪ್ರಜಾಜವಾಬ್ದಾರಿ ಸರಕಾರವನ್ನು ಮಂಜೂರುಮಾಡಬಹುದು ಎಂಬ ಊಹನೆಯು ಈಗ ದುಂಡು ಮೇಜು ಚರ್ಚೆಯಿಂದ ಸ್ವಲ್ಪ ಬಹಳಾಗಿದೆ. ರಾಜರುಗಳು ಆದಷ್ಟು ಬೇಗನೇ ಫೆಡರೇಶನಿಗೆ ಸೇರಬಹುದೆಂತಲೂ ಹಾಗೆ ಸೇರಿದ ಒಡನೇ ಮೇಲೆ ವಿವರಿಸಿದ ಶರದ ಪ್ರಜಾಜವಾಬ್ದಾರಿ ಸರಕಾರವನ್ನು ಮಧ್ಯವರ್ತಿ ಸರಕಾರದಲ್ಲಿಯೂ ಕೊಡಲಾಗುವುದೆಂತ ಸರ್ ಸ್ಯಾಮ್ಯುವೆಲ್ ಹೋರ್‌ರು ಹೇಳಿರುತ್ತಾರೆ. ರಾಜರುಗಳನ್ನು ಫೆಡರೇಶನಿಗೆ ಆದಷ್ಟು ಬೇಗನೇ ಸೇರಿಸುವ ಪ್ರಯತ್ನ ನಡೆಯುತ್ತಲಿದೆ.

ದೊಡ್ಡ ಪ್ರಾಂತ್ಯಗಳಲ್ಲಿ ಈಗ ಇರುವುದಕ್ಕಿಂತ ತುಂಬಾ ಹೆಚ್ಚಿನ ಅಧಿಕಾರಗಳು ಪ್ರಜಾ ಪ್ರತಿನಿಧಿಗಳಿಗೆ ಸಿಕ್ಕುತ್ತದೆ. ಮಧ್ಯವರ್ತಿ ಸರಕಾರದಲ್ಲೂ ಬೇಗನೇ ಸಿಕ್ಕಬಹುದು ಆದರೆ ಇಷ್ಟು ಸುಧಾರಣೆಗಳಿಂದ ಎತ್ರ ಹಿಂದೀ ಜನತೆಯ ಹೆಚ್ಚಿನ ಭಾಗಕ್ಕೆ ತೃಪ್ತಿಯೂಗಲಾರದಷ್ಟೆ.

ಕೊಡಗಿನ ಅಧಿಕಾರಗಳಲ್ಲಿ ಮೂರ್ಪಾಡುಗಳು.

ಕೊಡಗಿನ ಎಲ್ಲಾ ರಾಜಕೀಯ ಸಂಘಗಳ ಬೆಂಬಲವಿರುವ ಸರ್ವ ಪಕ್ಷ ಪರಿಷತ್ತಿನಲ್ಲಿ ಮಂಜೂರಾದ ಕೊಡಗಿನ ಸರ್ಕಾರಿ ಉದ್ಯೋಗಗಳಲ್ಲಿ ಮೂರ್ಪಾಡಿನ ಸೂಚನೆಗಳು ಈ ವೇದಲೇ ಪ್ರಕಟವಾಗಿದೆ. ಆ ಬದಲಾವಣೆಗಳನ್ನು ಸರ್ಕಾರವು ಅಂಗೀಕರಿಸಿಕೊಂಡು ಜಾರಿಗೆ ತಂದರೆ ಈ ಬಾಬಿನಲ್ಲಿ ಜನರಿಗೆ ಇರುವ ಅತೃಪ್ತಿಯು ಬಹಳ ಮಟ್ಟಿಗೆ ನಿವಾರಣೆಯಾದೀತು. ವರ್ಷವಾಗದೆ ಬಹಳ ಕಾಲ ಒಂದೇ ಸ್ಥಳದಲ್ಲಿ ಇರುವವರಲ್ಲಿ ನ್ಯಾಯ ತೀರ್ಪಿನ ಅಡಳಿತದ ಅಧಿಕಾರವಿರಬಾರದೆಂಬ ಜನರ ಕೋರಿಕೆಯು ನೆರವೇರಿದಂತಾಗುತ್ತದೆ. ಈಗ ಕಮಿಶನರೇ ನಮ್ಮ ದೇಶದ ಡಿಸ್ಟ್ರಿಕ್ಟ್ ಜಡ್ಜಿಯೂಗಿರುತ್ತಾರೆ. ಡಿಸ್ಟ್ರಿಕ್ಟ್ ಜಡ್ಜಿಯರಲ್ಲಿ ಜಿಲ್ಲೆಯ ಸಿವಿಲ್ ನ್ಯಾಯತೀರ್ಪಿನ ಮುಖ್ಯ ಅಧಿಕಾರಸರುವುದಾಗಿರುತ್ತದೆ. ಇಂಥಾ ಅಧಿಕಾರಕ್ಕೆ ಸಿವಿಲ್ ಕಾನೂನಿನ ತಿಳುವಳಿಕೆಯೂ ಅನುಭವವೂ ಇರುವವರಾಗಿರಬೇಕು. ನಮ್ಮ ದೇಶಕ್ಕೆ ಕಮಿಶನರುಗಳಾಗಿ ಬರುವವರಿಗೆ ಸಿವಿಲ್ ಕಾನೂನಿನ ಅನುಭವವೇನೂ ಇರುವುದಿಲ್ಲ. ಆದ್ದರಿಂದ ಡಿಸ್ಟ್ರಿಕ್ಟ್ ಜಡ್ಜಿಯ ಕೆಲಸವನ್ನು ಮಲಬಾರಿನ ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಜಡ್ಜಿಯರು ನೋಡುವಂತೆ ಕೇಳಿಕೊಳ್ಳಬೇಕೆಂಬ ಸೂಚನೆಯು ಬಹಳ ತೃಪ್ತಿಕರವಾಗಿದೆ.

ಈ ರೀತಿಯ ಏರ್ಪಾಡು ನಮ್ಮ ಪ್ರಾಂತ್ಯಕ್ಕೆ ಏನೂ ಹೊಸದಲ್ಲ. ಈಗ ನಮ್ಮ ಹೈಕೋರ್ಟಿನ ಕೆಲಸವು ಮದ್ರಾಸಿನ ಚಿತ್ತೂರು ಜಿಲ್ಲೆಯ ಡಿಸ್ಟ್ರಿಕ್ಟ್ ಜಡ್ಜಿಯರು ಮಾಡುತ್ತಲಿದ್ದಾರೆ. ನಮ್ಮ ಸರ್ಕಾರವು ಮದ್ರಾಸ್ ಸರ್ಕಾರವನ್ನು ಕೇಳಿಕೊಂಡರೆ ಮದ್ರಾಸ್ ಸರ್ಕಾರವು ಈ ಸಹಾಯವನ್ನು ಅವರ ಕೆಲಸಕ್ಕೆ ಏನೂ ವಿಶೇಷ ಅಡಚಣೆ ಇಲ್ಲದೆ ಸುಲಭವಾಗಿ ಮಾಡಿ ಕೊಟ್ಟಾರೆಂತ ನಂಬಬಹುದಾಗಿದೆ.

ಕಮಿಶನರೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿರಬೇಕೆಂಬದು ಇನ್ನೊಂದು ಸೂಚನೆಯೂಗಿದೆ. ಈ ಪದ್ಧತಿಯೇ ಹಿಂದುಸ್ಥಾನದ ಬೇರೆ ಎಲ್ಲಾ ಪ್ರಾಂತ್ಯಗಳಲ್ಲೂ ಜಾರಿಯಲ್ಲಿರುವುದಾಗಿದೆ. ಆದ್ದರಿಂದ ಇದನ್ನು ಜಾರಿಗೆ ತರುವುದು ಸರ್ಕಾರಕ್ಕೆ ಏನೇನೂ ಕಷ್ಟವಾಗಲಾರದು. ಈ ಮೂರ್ಪಾಡಿನಿಂದ ತುಂಬಾ ಹಣದ ಉಳುವರಿಯೂ ಇದೆ.

ಪೊಲೀಸ್ ಇಲಾಖೆಯ ಮುಖ್ಯಾಧಿಕಾರವು ಚೀಫ್ ಕಮಿಶನರ ಸೆಕ್ರೆಟರಿಯವರಲ್ಲಿ ಇರಬೇಕೆಂಬದು ಬಹಳ ಅವಶ್ಯವಾದ ಸಲಹೆಯೂಗಿದೆ. ಪೊಲೀಸ್ ಇಲಾಖೆಯು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಈಗ ಇರುವುದರಿಂದ ಕ್ರಿಮಿನಲ್ ನ್ಯಾಯ ತೀರ್ಪಿನ ಅಧಿಕಾರವೂ, ಅಪರಾಧಿಗೆ ಶಿಕ್ಷೆಯೂಗಲೇ ಬೇಕೆಂತವಾದ ಮಾಡುವ ಅಧಿಕಾರವೂ ಒಬ್ಬರಲ್ಲೇ ಇದ್ದಂತಾಗುತ್ತದೆ. ಆದ್ದರಿಂದ ಕ್ರಿಮಿನಲ್ ತಕ್ಕೀರ್‌ಗಳನ್ನು ಪತೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡದೇಕೆಂತ ವಾಧಿಸುವ ಅಧಿಕಾರವಿರುವ ಪೊಲೀಸ್ ಅಧಿಕಾರವು ನ್ಯಾಯತೀರ್ಪಿನ ಅಧಿಕಾರದಿಂದ ಸಂಪೂರ್ಣವಾಗಿ ಬೇರಾಗುವ ಏರ್ಪಾಡಾಗಿದೆ. ಡಿಪ್ಯುಟಿ ಸುಪರಿಂಟೆಂಡೆಂಟರೇ ಸುಪರಿಂಟೆಂಡೆಂಟರಾಗಿದ್ದು ಚೀಫ್ ಕಮಿಶನರ ಸೆಕ್ರೆಟರಿಯವರ ಮೇಲ್ವಿಚಾರಕ್ಕೆ ಒಳಗಾಗಿರಬೇಕು. ಈಗ ಜಾರಿಯಲ್ಲಿರುವ ಕ್ರಮದಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಗೂ, ಕಮಿಶನರಿಗೂ ಸಹ ಪೊಲೀಸ್ ಅಧಿಕಾರಗಳಿವೆ.

ರೆವಿನ್ಯೂ ಇಲಾಖೆಯ ಕೆಲಸಕ್ಕೆ ಅಸಿಸ್ಟೆಂಟ್ ಕಮಿಶನರು ಒಬ್ಬರು ಬೇಕು. ಇವರಿಗೆ ಈಗ ಇರುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೆಲಸವನ್ನು ಪಜಾಮಾಡಲು ಸೂಚನೆ ಇರುವುದರಿಂದ ಇವರನ್ನು ಲ್ಯಾಂಡ್ ರಿಕಾರ್ಡ್ಸ್ ಮತ್ತು ಸರ್ವೆ ಡಿಪ್ಯುಟಿ ಡೈರೆಕ್ಟರಾಗಿ ಸಹ ಮಾಡುವುದಂಲ್ಲಿ ಏನೂ ಆಕ್ಷೇಪಣೆ ಕಾಣುವುದಿಲ್ಲ. ಎಕ್ಸೈಸ್ ಇನ್ಸ್‌ಪೆಕ್ಟರ ಕೆಲಸವನ್ನು ತೆಗೆದು ಹಾಕಿ ಇತರ ಅಧಿಕಾರವನ್ನು ಸಂಬಂಧಾರಯುಗಳಿಗೆ ಹಿನುವರ ಸೇರಿದ್ದಿನಲ್ಲಿ ಹಂಚಿಕೊಟ್ಟು, ಎಕ್ಸೈಸ್ ಇನ್ಸ್‌ಪೆಕ್ಟರ ಸಂಬಳವನ್ನು ಕೋ-ಆಪರೇಟಿವ್ ರಿಜಸ್ಟ್ರಾರ್ ಮತ್ತು ಡಿಪ್ಯುಟಿ ಡೈರೆಕ್ಟರ್ ಆಫ್ ಎಗ್ರಿಕಲ್ಚರ್ ಕೆಲಸ ನೋಡುವವರಿಗೆ ಕೊಡಬಹುದು. ಕೋ-ಆಪರೇಟಿವ್ ರಿಜಸ್ಟ್ರಾರಾಗಿರುವವರು ಬೇರೆ ಅಧಿಕಾರಿಯೇ ಆಗಿದ್ದು ಆ ಕೆಲಸದಲ್ಲಿ ನಿಪುಣರಾದವರಾಗಿರಬೇಕೆಂಬ ಕೃಷಿ ಕಮಿಶನಿನ ಶಿಫಾರಸನ್ನು ಜಾರಿಗೆ ತರಲು ಸಹ ಅನುಕೂಲವಾಗುತ್ತದೆ.

ಈ ಮೂರ್ಪಾಡುಗಳನ್ನು ಜಾರಿಗೆ ತರಲು ಯಾವ ಕಮಿಟಿಯಿಂದ ವಿಚಾರವಾಗಬೇಕಾದ ಅವಶ್ಯವಿಲ್ಲ. ಅಂಥಾ ತನಿಖೆ ನಡಿಸುವಷ್ಟು ಕಾಲ ತಡ ಸಹ ಮಾಡಬಾರದು. ಈ ಸೂಚನೆಗಳನ್ನು ಜಾರಿಗೆ ತರಲು ಸರಕಾರವು ಒಪ್ಪುತ್ತದೆಯೆಂತ ತಿಳಿಸಿದರೆ ದೇಶದ ಜನರಿಗೆ ತುಂಬಾ ಸಮಾಧಾನವಾದೀತು.

ಸನಾತನಿಗಳಿಗೆ ಗಾಂಧಿಯವರ ವಿನಂತಿ.

ಇದೇ ತಾ. 4 ನೇ ಅಪರಾಹ್ನ ಗಾಂಧಿಯವರು ಅಸ್ಪೃಶ್ಯತಾ ನಿವಾರಣಾ ವಿರೋಧಿಗಳಾದ ಸನಾತನಿ ಹಿಂದುಗಳಲ್ಲಿ ಈ ಕೆಳಗಣ ವಿನಂತಿ ಮಾಡಿಕೊಂಡಿರುವರು. "ನೀವು ಏಷ್ಟೊಂದು ನಿರಾಕರಿಸಿದರೂ ನಿಮ್ಮ ಸಹೋದರ ಸನಾತನಿಯೇ ಆಗಿರುವ ನನ್ನ ದೀನ ವಿನಂತಿಯು ನಿವ್ಮೊಡನೆ. ನನ್ನನ್ನು ಬೈದು, ನನ್ನ ಮೇಲೆ ನಾನಾ ಕ್ಷುದ್ರಾರೋಪಗಳನ್ನು ನೀತ್ಯ ಮಾಡುತ್ತಿರುವುದೇ ನನ್ನ ಮೇಲೆನ ನಿಮ್ಮ ವಿಕಲ್ಪ ಪ್ರೇಮವನ್ನು ಸೂಚಿಸುವುದು. ತನ್ನ ಹಲವು ಮಂದಿ ಗಂಡಂದಿರನ್ನೆಲ್ಲಾ ಕೈಪ್ಪಿಪಡಿಸಲಾರದ ಬಡ ಪತ್ನಿಯನ್ನು ಅವರೆಲ್ಲಾ ನಿರಾಕರಿಸುವೆವೆಂಬಂತೀಗ ಪಾಡಾಗಿದೆ ನನ್ನದು. ಆದರೆ, ಸೇವಕಿಯಂತೆ ತಮ್ಮ ಚಾಕರಿ ಮಾಡುತ್ತಿದ್ದ ಅವಳನ್ನವರು ಬಿಟ್ಟುಬಿಡಲಾಗದೆ ತಮ್ಮ ಕ್ರೋಧದ ಉರಿಯನ್ನೆಲ್ಲಾ ಅವಳ ಮೇಲೆ ಕಾರಿ ಅವಳನ್ನು ನಾನಾ ವಿಧವಾಗಿ ಹಂಗಿಸಿ ಭಂಗಿಸುವರು. ಈ ವಿಧೇಯ ಪತ್ನಿಯು, ದೃಢಪತಿನಿಷ್ಠೆಯುಳ್ಳವಳಾಗಿ, ಈ ಸಿಟ್ಟಿನ ಸುಳಿಗಾಳಿಯನ್ನು ತಾಳ್ಮೆಯಿಂದ ಭೀಸಿ ಹೋಗಬಿಡುವಳು. ಯಾಕಂದರೆ ಇಚ್ಛಾಸಂಸಾರವಾಗಿ ಅವಳ ತಲೆಯ ಮೇಲೆ ಹೊರಿಸಲ್ಪಡುವ ಯಾವ ದೋಷದೂಷಣೆಗಳಿಗೂ, ಅವಳು ಅನರ್ಹಳಾಗಿ ನಿರ್ದೋಷಿಯಾಗಿರುವಳು. ಒಮ್ಮೆ ಎದ್ದ ಪ್ರಚಂಡ ಬಿರುಗಾಳಿಯು ಶಾಂತವಾದ ಮೇಲೆ, ಅವಳ ಗಂಡಂದಿರು ಅವಳನ್ನು ಮೊದಲಿಗಿಂತಲೂ ಹೆಚ್ಚಾಗಿ ಪ್ರೀತಿಸಿ, ತಮ್ಮ ಕೋಪಾಟೋಪಕ್ಕಾಗಿ ತಾವೇ ನಕ್ಕು, ತಮ್ಮ ಸಹಧರ್ಮಿಣಿಯು ತನ್ನ ಸರ್ವಸ್ವವನ್ನು ತಮಗೆ ಸಮರ್ಪಿಸಿರುವಳೆಂಬುದನ್ನು ಕಂಡು ಕೊಳ್ಳದಿರರು. ನನ್ನ ಸಂಗತಿಯೂ ಇದೇ ರೀತಿಯಾಗುವುದೆಂದು ಭವಿಷ್ಯ ಹೇಳಲು ನಾನು ಎದೆಗೊಳ್ಳುವೆನು. ನಾನು ನಿಮಗೆ ಹಾನಿಮಾಡಿರುವೆನೆಂದು ನೀವು ಭಾವಿಸಿಕೊಂಡು ಅದನ್ನೇ ಮಥಿಸಿ ನನ್ನ ಮೇಲೆ ಮುನಿದು ಬಿದ್ದಿರುವಿರಿ. "ಕ್ರೋಧವು ಭ್ರಾಂತ್ಯಿಯನ್ನುಂಟುಮಾಡುವುದು. ಭ್ರಾಂತಿಯಿಂದ ಮಂವೆಯುಂಟಾಗುವುದು. ಮಂವೆಯಿಂದ ಬುದ್ಧಿ ವೂಂದ್ಯವಾಗುವುದು. ಬುದ್ಧಿ ಶೂನ್ಯತೆಯು ನಾಶಕ್ಕೆ ಕಾರಣವಾಗುವುದು." ಎಂಬೀ ಶ್ಲೋಕವನ್ನು ನೀವು ಮರೆತಿರುವಂತಿದೆ. ಕ್ರೋಧೊದ್ರೇಕದಲ್ಲಿ ನೀವು ಮಾಡುತ್ತಿರುವುದೇನೆಂದು ನಿಮಗೇನೇ ತಿಳಿಯದು. ನನ್ನ ಉದ್ದೇಶವೇನೆಂಬುದನ್ನು ವಿಚಾರಿಸಿ ತಿಳಿದುಕೊಳ್ಳಲೂ ನೀವು ಲಕ್ಷಿಸಿರುವುದಿಲ್ಲ

ಸನಾತನ ಧರ್ಮವೆಂದರೇನು?

ಸರ್ವಸಾಮಾನ್ಯ ಜನರು ತಿಳಿದಿರುವ ಸನಾತನ ಧರ್ಮವೆಂದರೆ ಎಲ್ಲರೂ ಅನುಸರಿಸಬಹುದಾದ ಸದಾಚಾರವು. ಎಷ್ಟೊಂದು ಜನಾದರಕ್ಕೆ ಪಾತ್ರವಾದರೂ, ದುರಾಚಾರ ದುರಭ್ಯಾಸಗಳನ್ನು ಅದು ನಿಷೇಧಿಸುತ್ತದೆ. ಒಂದುಗೂಡಿಸುವ ಪ್ರೇಮ ಒಂಧವೇ ಧರ್ಮವು. ದುರಾಚಾರಗಳು ಇಕ್ಕಟ್ಟನ್ನುಂಟುಮಾಡುವುದರಿಂದ ಎಂದೆಂದಿಗೂ ಧರ್ಮವೆನಿಸವು. ಅಂದ ಮೇಲೆ, ಪರಿಣಾಮಗಳನ್ನೆಲ್ಲಾ ಜನತೆಯ ಮುಂದೆ ನಿಷ್ಪಕ್ಷಪಾತವಾಗಿ ಇರಿಸಿದ ಮೇಲೆ, ಅವರು ಕೆಟ್ಟದಾಗಿರದ ಅದೊಂದು ಮಾರ್ಗವನ್ನನುಸರಿಸಲೆಳಸಿದರೆ ಅದು ಸನಾತನ ಧರ್ಮವಾಗದೇ? ಅದೇ ಧರ್ಮದ ಬೆಳವಣಿಗೆಯ ಒಂದು ಲಕ್ಷಣವಲ್ಲವೇ? ನೀವು ಇಷ್ಟಕ್ಕೆ ಒಪ್ಪುವಿರಾದರೆ ನಾನು ಇದಕ್ಕಿಂತ ಹೆಚ್ಚಿನದೇನೂ ಮಾಡಿರುವುದಿಲ್ಲ. ನನಗೆ ಒಳ್ಳೇದೆಂದು ತೋರುವ, ಪವಿತ್ರ ಶಾಸ್ತ್ರ ಪುಸ್ತಕಗಳನ್ನು ಸ್ವತಹ ಓದಿ ಅನುಭವವುಳ್ಳ ವಿದ್ವಾಂಸರು ತಾವು ತಿಳಿದುಕೊಂಡ ಅರ್ಥ ಪ್ರಕಾರ ಒಳ್ಳೇದೇ ಆಗಿರುವ ದಾರಿಯನ್ನನುಸರಿಸಲು ಜನರು ಎಷ್ಟರ ಮಟ್ಟಿಗೆ ಸಿದ್ಧರಿರುವರೆಂಬುದನ್ನು ಮಾತ್ರ ಕಂಡುಕೊಳ್ಳಲೆತ್ನಿಸುತ್ತಿದ್ದೇನೆ. ಆದರೆ ಈ ವಿದ್ವಾಂಸರ ಅರ್ಥವೂ ತಪ್ಪೆಂದು ನಿಮ್ಮ ವಾದ. ಆಗಲಿ, ಇತ್ಯಂಡದವರ ಅರ್ಥವೂ ಜನತೆಯ ಮುಂದಿಡಲ್ಪಟ್ಟ ಅವರೆ ತಮಗೆ ಬೇಕಾದುದನ್ನು ಅನುಸರಿಸಲಿ. ಅವರು ನನ್ನ ಅರ್ಥವನ್ನು ಸ್ವೀಕರಿಸಿದರೆ ಅದು ಸನಾತನ ಧರ್ಮವಾಗದೇ? ಆಗ ನೀವು ನನ್ನ ಅರ್ಥವನ್ನು ಸ್ವೀಕರಿಸಬೇಕೆಂದೂ ಇಲ್ಲ. ನಿಮ್ಮದನ್ನೇ ನೀವು ಹಿಡಿಕೊಂಡಿರಬಹುದು. ಆದಂ ಅದನ್ನು ನೀವು ಸನಾತನ ಧರ್ಮವೆಂದು ಮಾತ್ರ ಕರೆಯಬಾರದು. ನಿಮ್ಮ ಅರ್ಥವನ್ನು ಅತಿ ಹೆಚ್ಚಿನ ಹಳ್ಳಿಗರು ಸ್ವೀಕರಿಸುವರೆಂದು ಗ್ರಹಿಸಿಕೊಂಡು ಅದೇ ಸನಾತನ ಧರ್ಮವೆಂದು ನೀವು ಭಾವಿಸುವಿರಿ. ನನ್ನ ಅರ್ಥವು ಹೆಚ್ಚಿನ ಜನರಿಗೆ ಸ್ವೀಕಾರ್ಯವಾಗದೆಂದು ಗ್ರಹಿಸಿ ಅದು ಸನಾತನ ಧರ್ಮವಾಗದೆಂದು ನಿರಾಕರಿಸುವಿರಿ. ನಾನು ಅನೇಕ ವರ್ಷಗಳಿಂದ ರಾಜನೀತಿಜ್ಞನಾಗಿಯಲ್ಲ, ಧಾರ್ಮಿಕನಾಗಿ ವಿಲಾಯಿತ ಜನರೊಳಗೆ ತಿರುಗಾಡಿರುವೆನು. ಅವರು ನನ್ನನ್ನು ಧಾರ್ಮಿಕ ಮನುಷ್ಯನಾಗಿಯೇ ಸ್ವೀಕರಿಸಿದ್ದರು. ಮತ್ತು ನೀವು ಈಗ ನನ್ನನ್ನು ಅಷ್ಟೊಂದು ಉಗ್ರತೆಯಿಂದ ನಿರಾಕರಿಸುವುದೇ, ಇಷ್ಟಂ ವಂಗೆ ನನ್ನನ್ನು ಧಾರ್ಮಿಕ ಮನುಷ್ಯನೆಂದೇ ನಂಬಿದ್ದೀರಂಬುದಕ್ಕೆ ಸಾಕ್ಷ್ಯವು. ಧಾರ್ಮಿಕ ಸಭೆಗಳಲ್ಲಿ ನನಗೆ ಯಾವಾಗಲೂ ಸ್ವಾಗತ ದೊರೆತು, ರಾಜನೀತಿಜ್ಞನು ನನ್ನನ್ನು ಯಾವಾಗಲೂ ಅವ್ಯವಹಾರ್ಯ ಆದರ್ಶವಾದಿಯಂದು ಭಾವಿಸಿ ದೂರೀಕರಿಸಿರುವುದನ್ನು ನೀವು ನೋಡಿರುವುದಿಲ್ಲವೇ? 1915 ರಲ್ಲಿ ನಾನೊಬ್ಬ ಅಜ್ಞಾತ ಮನುಷ್ಯನಾಗಿರುವ ಸಮಯವು ನನಗಿದ್ದಾಗಲೂ ನಡೆದಿರುವುದೂ ಇದೇ.

ಹೆಚ್ಚಿನ ಹಿಂದುಗಳನ್ನು ಅಸ್ಪೃಶ್ಯರಾಗಿ ನೋಡಿ, ದೇವಸ್ಥಾನವೇ ಮೊದಲಾದುವಕ್ಕೆ ಅವರ ಪ್ರವೇಶವನ್ನು ನಿಷೇಧಿಸಿ ದೊಡ್ಡ ತಪ್ಪುಮಾಡಿದಂತಾಗಿದೆಂದೇ ಸನಾತನ ಧರ್ಮದ ನನ್ನ ಅರ್ಥವು ನನ್ನಲ್ಲಿಂಟುಮಾಡಿರುವ ನಿರ್ಧಾರ. ಈ ಹಿಂದುಗಳನ್ನು ಅಸ್ಪೃಶ್ಯರಾಗಿ ಪರಿಗಣಿಸುವುದು ಸನಾತನ ಧರ್ಮ ಪ್ರಕಾರ ತಮ್ಮ ಕರ್ತವ್ಯವು. ಆದುದರಿಂದ ಅವರು ಯಾವ ಸಂದರ್ಭದಲ್ಲಾದರೂ ತಮ್ಮಂತೆಯೇ ದೇವಸ್ಥಾನ ಪ್ರವೇಶಿಸಲು ಅನರ್ಹರೆಂದು ನಿಮ್ಮ ವಾದ. ಈ ಎಂಡು ಭಿನ್ನ ಭಿನ್ನ ಅರ್ಥಗಳಲ್ಲಿ ತಪ್ಪುಗೆ ಬೇಕಾದುದನ್ನು ದೇವಸ್ಥಾನಕ್ಕೆ ಹೋಗುವವರೇ ಆರಿಸಲೆಂದು ನನ್ನ ಹೇಳಿಕೆ. ನಾನು ಇಷ್ಟೊಂದು ಸರಳ ತರ್ಕವನ್ನು ಹೂಡಿರುವಾಗ ನೀವು ಕೋಪಾವಿಷ್ಟರಾಗಿರುವಿರಿ. ಅದೆಂದಿಗೂ ನ್ಯಾಯವಿವೇಚನೆ ಅಥವಾ ಸಹಿಷ್ಣುತೆಯೊಗಲಾರದು. ನೀವು ಅನ್ಯಾಯ, ಅನೀತಿ, ಅಥವಾ ಆಕ್ಷೇಪಣೀಯ ಸಾಧನವನ್ನು ಪಯೋಗಿಸದ ಹಿಂದುಗಳಲ್ಲದವರಿಗೂ ತಮ್ಮ ಅಭಿಪ್ರಾಯ ಪ್ರಚಾರಪಡಿಸಲು ಕೊಟ್ಟಿರುವ ಸ್ವಾತಂತ್ರ್ಯವನ್ನು ನನಗೆ ನಿರಾಕರಿಸುವಿರೆಂದು ನಾನೆಣಿಸುವುದಿಲ್ಲ. ನನ್ನ ಸರಳ ಉಪವಾಸವು ಒಂಂದು ವಿಧವ ಬಲೋದ್ರೇಂಧನವೆಂದು ನೀವು ಕರೆಯುತ್ತೀರಿ. ಧರ್ಮಕ್ಕೆ ಹಾನಿಯುಂಟಾಗುವ ಸಂದರ್ಭದಲ್ಲಿ ಉಪವಾಸ ಮಾಡಿದ ಉದಾಹರಣೆಗಳು ನನ್ನ ಧಾರ್ಮಿಕ ಚರಿತ್ರೆಯಲ್ಲಿ ಹಲವಿಲ್ಲವೇ?

ದೇವಸ್ಥಾನ ಪ್ರವೇಶ ಮಸೂದೆಯನ್ನು ಖಂಡಿಸುವವರಿಗೆ ಉತ್ತರ.

ಡಾಕ್ಟರ್ ಸುಬ್ಬರಾಯನವರು ಸಂಳವಾಡೊಂದು ಬೀಲಿನ ನಿಮಿತ್ತ ತಮ್ಮ ಸರ್ವ ಧರ್ಮವೇ ನಾಶವಾಗುವುದೆಂದು ನೀವು ಕೂಗೆಬ್ಬಿಸುವಿರಿ. ಆದರೆ ಆ ಮಸೂದೆಯಲ್ಲಿ ಅಂತಹುದೇನೂ ಇಲ್ಲ. ಅದು ಹರಿಜನರ ದೇವಸ್ಥಾನ ಪ್ರವೇಶಕ್ಕೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯವನ್ನು ತಿಳಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವಂತಹುದಾಗಿದೆ. ಸನಾತನಿಗಳ ಪ್ರೇರಣೆಯಂತೆ ಬ್ರಿಟಿಷ್ ಕೋರ್ಟುಗಳು ಪೂರ್ವಾಚಾರಗಳಿಗೆ ಕಾನೂನಿನ ಸಮರ್ಥನೆಯಿಂತಾಯಿರುತ್ತಿದ್ದರೆ, ನನ್ನ ಕೌನ್ಸಿಲುಗಳಲ್ಲಿ ಹಿಂದು ಶಾಯಿದೆಕಾರರ ಧಾರ್ಮಿಕ ಸಂಬಂಧವಾದ ಕಾನೂನುಗಳನ್ನು ಮಾಡಿರುತ್ತಿದ್ದಿ ಈಗಣ ಮಸೂದೆಯ ಅಗತ್ಯವೇ ಇದಿಲ್ಲ. ಆದುದರಿಂದ ಡಾಕ್ಟರ್ ಸುಬ್ಬರಾಯನವರ ಮಸೂದೆಯು ಹಿಂದೂ ಧರ್ಮಕ್ಕೆ ಹೊಸತಾದುದೇನನ್ನಾದರೂ ತಂದು ಹಾಕಲಿ ಅಧುನಿಕ ಪರಿಸ್ಥಿತಿಯಿಂದುಂಟಾದ ತಡೆಯನ್ನು ಮಾತ್ರ ತೆಗೆದುಹಾಕುವಂತಹುದೆ. ಈಗಣ ಬ್ರಿಟಿಷ್ ಕಾನೂನಿನಂತೆ ಒಬ್ಬನೇ ಒಬ್ಬನು 9999 ಮಂದಿಯ ಇಚ್ಛೆಯನ್ನೂ ವಿಫಲಗೊಳಿಸಬಹುದು. ಇಂತಹ ಪರಿಸ್ಥಿತಿಯು ಈಗ ನಿಮಗೆ ಅನುಕೂಲವೆಂದು ತೋರಿದರೂ, ಸರಿಯಾಗಿ ವಿಚಾರಿಸಿದರೆ ನನಗೂ ನಿಮಗೂ ಅದು ಅತ್ಯಂತ ಹಾನಿಕರವೇ ಸರಿ. ಅದು ಧಾರ್ಮಿಕ ಜೀವನವನ್ನೇ ನಿರ್ಜೀವಗೊಳಿಸುವ ದಾಗಿದೆ. ಸನಾತನ ಧರ್ಮವಾಗಲಿ, ಬೇರೆ ಯಾವುದೇ ಧರ್ಮವಾಗಲಿ ನ್ಯಾಯವನ್ನೀಯುವಂತಹದಿರಬೇಕು. ನಿಮ್ಮಲ್ಲಿ ನ್ಯಾಯದೃಷ್ಟಿಯಿದ್ದಲ್ಲಿ ಅದನ್ನು ಒರೆಗೆ ಹಚ್ಚುವ ಇನ್ನೊಂದು ಸಂಗತಿಯನ್ನು ನಾನು ಸೂಚಿಸುವೆನು. ಹರಿಜನರಿಗೆ ದೇವಸ್ಥಾನ ಪ್ರವೇಶವೀಯುವುದು ಹಿಂದು ಧರ್ಮಾನುಗುಣವಾಗಿರುವುದೆಂದು ನಂಬುವ ಸವರ್ಣೀಯರು ಹೆಚ್ಚಿನವರಿಲ್ಲದಿದ್ದರೂ ಗಣನೀಯ ಸಂಖ್ಯಾಕರಿರುವರೆಂಬುದನ್ನು ನೀವು ನಿರಾಕರಿಸಲಾರಿರಿ. ಇತ್ಯಂಡದವರಿಗೂ ನ್ಯಾಯವೀಯುವಂತೆ ನಾನು ಗುರುವಾಯೂರು ದೇವಸ್ಥಾನದ ಕುರಿತು ಮಾಡಿರುವ ಸೂಚನೆಯು ಪೂರ್ವಾಚಾರ ವಿಧಿಗಳಿಗೆಲ್ಲಾ ಮಾನ್ಯವೀಯುವುದಾಗಿದೆ. ಗುರುವಾಯೂರಿಗೆ ಪುರಾತನ ಕಾಲದಿಂದಲೂ ವರ್ಷಕ್ಕೊಂದು ದಿನ ಇತರ ಹಿಂದುಗಳಂತೆ ಹರಿಜನರೂ ಪ್ರವೇಶಿಸುವ ರೂಢಿಯಿದೆ. ಆಂದ ಮೇಲೆ ಅವರನ್ನು ಪ್ರತಿದಿನವೂ ಅದೊಂದು ನಿಯಮಿತ ಸಮಯದಲ್ಲಿ ಪ್ರವೇಶಿಸಬಿಡಬೇಕೆಂಬ ನನ್ನ ಸೂಚನೆಯಲ್ಲಿ ಧರ್ಮವಿರೋಧವಾದುದೇನೂ ಇಲ್ಲ. ವಿಕಾದತಿ ದಿನ ಹರಿಜನರು ಗುರುವಾಯೂರಿಗೆ ಪ್ರವೇಶಿಸಿದ ಮೇಲೆ ಕಲಶಕಟ್ಟಿ ಶುದ್ಧವಾಗುವುದೆಂದು ನೀವು ಹೇಳಬಹುದು. ಈ ಅಭಿಪ್ರಾಯವೇ ನನಗೆ ಅಸಹನೀಯವಾದರೂ, ಸನಾತನಿಗಳ ಆಚಾರ ನಿಷ್ಠೆಯು ಅದರಿಂದ ಕೃಶವಾಗುವುದಾದರೆ ಪ್ರತಿ ದಿನ ಈ ಶುದ್ಧವು ನಡಿಸಲ್ಪಡಲಿ. ಸನಾತನಿಗಳ ಅಸ್ಪೃಶ್ಯತೆಯ ಪ್ರತಿಪಾದನೆಯಲ್ಲಿ ಧ್ವೇಷವಾಸನೆಯೇನೂ ಇಲ್ಲೆಂದು ನನಗೆ ಬರುವ ಸನಾತನಿಗಳ ಪತ್ರಗಳೆಲ್ಲೆಲ್ಲಾ ಬರೆಯಲ್ಪಟ್ಟಿವೆ. ಹರಿಜನರು ಇತರರಂತೆಯೇ ದೇವರ ಮಕ್ಕಳೆಂದರೂ, ಉಚ್ಚ ನೈತಿಕ ಕಾರಣಗಳಿಂದ ಧರ್ಮವು ಅವರನ್ನು ಪ್ರತ್ಯೇಕವಾಗಿರಿಸಿರುತ್ತದೆ. ಆದರೆ ಅವರನ್ನು ಪ್ರೀತಿಯಿಂದಿಲೇ ಅಸ್ಪೃಶ್ಯರಾಗಿ ದೂರವಿರಿಸಿ ಅವರಿಗೆ ಎಲ್ಲಾ ತಂದ ನಾಗರೀಕ ಹಕ್ಕುಗಳನ್ನೀಯಬೇಕೆಂದು ಅವರ ಉದ್ಘೋಷ. ಪ್ರಕೃತದ ವಾಸ್ತವಿಕ ಸಂಗತಿಗಳಿಂದ ಅವರ ಈ ತರ್ಕವನ್ನು ವಿಚಾರಿಸುವ. ಅಸ್ಪೃಶ್ಯರಾರು ಮತ್ತು ಯಾಕೆಂಬುದನ್ನು ನೀವು ತಿಳಿದಿರುವೀ? ನಿಗೂಢ ಹಾಗೂ ಕ್ರೂರವಾದೊಂದು ಸಾಮಾಜಿಕ ವ್ಯವಸ್ಥೆಯು ಹರಿಜನರೆಲ್ಲರನ್ನೂ ಜಮೀನುರಹಿತರನ್ನಾಗಿ ಮಾಡಿರುವುದೇಕೆಂದು ಬಲ್ಲಿರಾ? ಅವರಲ್ಲೊಬ್ಬನಿಗೆ ಜಮೀನಿದ್ದರೂ ಅದನ್ನವನು ನಿಮ್ಮಂತೆಯೇ ಉಪಯೋಗಿಸಿಲ. ನಾಧ್ಯವಿಲ್ಲ. ನಿಮಗಿರುವ ಅಸಂಖ್ಯಾಕ ಅನುಕೂಲತೆಗಳು ಅವನಿಗಿಲ್ಲ. ಅವನಿಗೆ ಪ್ರತ್ಯೇಕ ಅನುಕೂಲತೆಯ ಏರ್ಪಡಿಸಲ್ಲೇನೂ ನೀವು ಮಾಡಿಲ್ಲ. ಆದುದರಿಂದ ಅವನು ಬಳಲಿ, ಬಾಯಾರಿ ಶಾಯಲನುವಾದರೂ ನೀವು ಒಂದು ಗುಟುಕು ನೀರು ಅವನಿಗೆ ಕೊಡಲಾರಿರಿ. ನಿಮಗೆ ತೆರೆದಿರುವ ನಾನಾ ಉದ್ಯೋಗಗಳು ಅವನಿಗೆ ಬಂದಾಗಿರುತ್ತದೆ. ವೈದ್ಯಕೀಯ ಮತ್ತು ಧಾರ್ಮಿಕ ಸಹಾಯವೂ ಅವನಿಗೆ ನಿರಾಕರಿಸಲ್ಪಟ್ಟಿವೆ. ಇದೀಗ ನಿಮ್ಮ ಪ್ರೀತಿಯ ಫಲಿತಾಂಶವಾದರೆ ಅಂತಹ ಪ್ರೀತಿಗಿಂತ ದ್ವೇಷವೇ ಲೇಸೆಂಬ ನನ್ನ ಅಭಿಪ್ರಾಯಕ್ಕೆ ನೀವು ಜಿಗುಪ್ಸೆವುದಿಲ್ಲವೇ? ಮೇಲಿನ ಫಲುಕ್ಕಿಂತ ಹೆಚ್ಚು ಕಟುವಾದುದನ್ನೇನೂ ನನಗೆ ಕಲ್ಪಿಸಲು ಸಾಧ್ಯವಿಲ್ಲ. ಇಂತಹದು ಲೋಕದಲ್ಲೇ ಇರಲಾರದು; ಅದು ಕೂಡ ಧರ್ಮದ ಹೆಸರಲ್ಲಿ. ನನ್ನ ಆತ್ಮದ ತೀವ್ರ ವೇಧನೆಯಿಂದ ಹೊರಡುವ ಈ ವಿನಂತಿಯನ್ನು ನಿವ್ಮೊಡನೆ ಮಾಡಿಕೊಂಡಿರುತ್ತೇನೆ. ಈ ವೇಧನೆ, ಮತ್ತು ನಾಚಿಕೆಯನ್ನು ನೀವೂ ನನ್ನೊಂದಿಗೆ ಪಾಲುಪಡೆದು ಸಹಕರಿಸಬೇಕೆಂದೇ ನನ್ನ ಕೇಳಿಕೆ. ಯಾಕಂದರೆ, ಸನಾತನ ಧರ್ಮವು ಪುನರುಜ್ಜೀವಿತವಾಗಿ ಈಗ ಅದನ್ನು ನಿರಾಕರಿಸುತಿರುವ ಮಿಲ್ಯಾಂತರ ಜನರಲ್ಲಿ ಅದು ಕಳೆದುಂಬಿರುವಂತೆ ಮಾಡುವ ಹೊರತು ಅನ್ಯಥಾ ಯಾವ ಉದ್ದೇಶವೂ ನನ್ನಲಿಲ್ಲ. ನಿಮ್ಮಲ್ಲಿ ಜಾಗೃತಿಯುಂಟಾಗಿರುವುದು ಸಂತೋಷ ವಿಷಯವು. ಆದರೆ ಈಗ ನೀವು ನನ್ನೊಡನೆ ನಿಷ್ಫಲ ಜಗಳವನ್ನಿ ನಿರತರಾಗುವ ಬದಲಿಗೆ ಕಾರ್ಯಕ್ಕೆ ತೊಡಗಿ ಹಿಂದು ಧರ್ಮದೊಳಗೆ ಸೇರಿರುವ ದೋಷಗಳನ್ನೆಲ್ಲಾ ಪರಿಶೀಲಿಸಿ ಅವುಗಳನ್ನು ನಿವಾರಿಸಲು ಪ್ರಜಾಶಯತ್ನಮಾಡಬೇಕು. ನನ್ನೊಡನೆ ನಿಮ್ಮ ಜಗಳವು ನಿರರ್ಥಕ. ಏಕೆಂದರೆ ನಾನೆಮ್ಮಲ್ಲಿ ಸ್ಪರ್ಧಕ್ಕಿಯೂಗಲಾರೆನು. ಇಂಗ್ಲೀಷ್ ಗಾದೆಯೊಂದರಂತೆ ಯಾವ ಜಗಳಕ್ಕಾದರೂ ಇಬ್ಬರು ಸೇರಬೇಕು. ಆ ಇಬ್ಬರಲ್ಲಿ ಒಬ್ಬನಾಗಲು ನಾನು ನಿಮಗೆ ಸಹಾಯಮಾಡೆನು.

ನವಯುಗ.

ವಿಮರ್ಶೆ.

ಪ್ರೋಸ್ಪ ವೊಸ್ಪರ:—ಬರಹಗಾರರು—ಶ್ಯಾಮಕೃಷ್ಣ ಶಂಟರ ತಂಡದ ಒಂದಾಣೆ ಮೂಲೆಯ ೧೩ನೇ ಪುಸ್ತಕ—ವಾರ್ಷಿಕ ಚಂದಾ ೧—೪—೦.

ಇದು ವರೆಗೆ ಈ ಮೂಲೆಯಲ್ಲಿ ಭಾರ್ಗವಿ. ವೀರ ವಲ್ಲಭಭಾಯಿ, ಎಚ್ಚಮ, ಸ್ವಾರ್ಥತ್ಯಾಗ, ನಿಸರ್ಗಾವಲೋಕನ ಮುಂತಾದ ಸಣ್ಣ ಪುಸ್ತಕಗಳು ಹೊರಬಿದ್ದು ಈಗ ಪ್ರೋಸ್ಪ ವೊಸ್ಪರ ಎಂಬುದು ಹೊರಬಿದ್ದಿದೆ. ಇದು ಲೋಕವಿಖ್ಯಾತರಾದ ರವೀಂದ್ರನಾಥ ಟಾಗೂರರವರ ಇದೇ ಹೆಸರಿನ ಇಂಗ್ಲಿಷ್ ನಾಟಕದ ಕನ್ನಡನುವಾದ. ಇದು ಕಥೆ ರೂಪದಲ್ಲಿದೆ.

ಇದೊಂದು ಅಧ್ಯಾತ್ಮಿಕ ಕಥೆ ಒಬ್ಬ ಹಳ್ಳಿಯ ಪ್ರೋಸ್ಪ ವೊಸ್ಪರು ತನ್ನ ಅನಾರೋಗ್ಯದ ದೆಸೆಯಿಂದ ವರ್ಗಕ್ಕೆ ಬರೆಯುತ್ತಾನೆ. ಅವರ ಅರ್ಜಿಯು ನಾಮಂಜೂರಾಗಲು ಹಳ್ಳಿಯನ್ನು ಬಿಡುವ ಏರ್ಪಾಡು ಮಾಡುವನು. ಇವರು ಸಾಕಿಕೊಂಡಿದ್ದ ಅದೇ ಹಳ್ಳಿಯ ಸುಶೀಲೆಯು ತನ್ನೊಡೆಯನ ವಿಯೋಗಕ್ಕಾಗಿ ದುಃಖಿಸುವಳು ದೋಣಿಯು ಮೇಲೆ ಹೋಗುತ್ತಿದ್ದ ಪ್ರೋಸ್ಪರನಿಗೆ ಪುನಹ ಸುಶೀಲೆಯನ್ನು ತನ್ನೂರಿಗೆ ಕೊಂಡು ಹೋಗಬೇಕೆಂದು ಆಶೆ ಹುಟ್ಟುವುದು ಸಾಗರದೊಳಗಿನ ರಭಸದ ತೆರೆಗಳ ಹೊಡೆತಕ್ಕೆ ಎರಡು ಕಟ್ಟಿಗೆಯ ತೆರೆಗಳು ಹೇಗೆ ಒಂದಾಗಿ ಮತ್ತೆ ಅಗಲುವವೋ ಹಾಗೆ ಮನುಷ್ಯರೂ ಕೆಲವೊಂದು ಪ್ರಸಂಗದಲ್ಲಿ ಒಬ್ಬರಿಗೊಬ್ಬರೂ ಮಿಲಿತರಾಗಿ ಮತ್ತೆ ಅಗಲುವರು ಎಂದು ಹೇಳಿಕೊಂಡು ಸಮಾಧಾನಪಟ್ಟುಕೊಳ್ಳುವರು. ಎಲ್ಲರ ಬಾಳು ಹೀಗೆಯೇ ಅಲ್ಲವೇ?

ಮೂಲೆಯ ಹೊತ್ತಿಗೆಗಳೆಲ್ಲಾ ಕರ್ಣಾಟಕ ಸಾಹಿತ್ಯ ಸೇವಾ ಮಂಡಲ, ಬೆಳಗಾವಿ, ಎಂಬಲ್ಲಿ ದೊರೆಯುತ್ತವೆ. ಈ ಸಾಹಿತ್ಯ ಮಂಡಲಕ್ಕೆ ಚಂದಾದಾರರಾಗುವುದರ ಮೂಲಕ, ಕನ್ನಡಿಗರೆಲ್ಲರೂ ಸಹಾಯ ಮಾಡುವುದವಶ್ಯಕ.

ಸಚಿತ್ರ ಕರ್ಣಾಟಕ ಬಾಲಬೋಧೆ—ಲೇಖಕರು—ವಿದ್ವಾನ್ ಪಿ. ಆರ್. ಕರಿಬಸವ ಶಾಸ್ತ್ರಿಗಳು—ಯಸ್. ಲಿಂಗಣ್ಣಯ್ಯ ಅಂಡ್ ಸನ್ಸ್ ಬೆಂಗಳೂರು—ಪ್ರಕಾಶಕರು. ಬೆಲೆ ನಾಲ್ಕಾಣೆ.

ಬಾಲಬೋಧೆಯು ಎರಡು ಭಾಗಗಳಿಂದ ಕೂಡಿದ್ದು, ಮಕ್ಕಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಇದನ್ನು ಮೈಸೂರು ದೇಶದಲ್ಲಿಯೇ ಅಲ್ಲದೆ ಧಾರವಾಡ ಪ್ರಾಂತ್ಯದಲ್ಲಿಯೂ ಉಪಯೋಗಿಸುತ್ತಾರೆ.

ಸ್ವರ ಚಿಹ್ನೆಯ (Phoneties) ಮತ್ತು ನೋಡಿ ಹೇಳು (Look and say Method) ಪದ್ಧತಿಗಳನ್ನು ವಿಶೇಷ ಮಾಡಿಕೊಂಡು ಅಕ್ಷರೋಚ್ಚಾರಣೆಯನ್ನು ಕಲಿಸುವ ರೀತಿಯಲ್ಲಿ ಇದು ಬರೆಯಲ್ಪಟ್ಟಿದೆ. ಅಕ್ಷರ ರಚನಾಕ್ರಮವು ಯೋಗ್ಯವಾದದ್ದೇ. ಬಣ್ಣದ ಚಿತ್ರಗಳು ಬಹಳ ಇವೆ. ಎರಡಕ್ಷರದ ಪದಗಳಿಂದ ಅನೇಕಾಕ್ಷರ ಪದಗಳ ವರೆಗಿನ ವಾಕ್ಯ ಸಂಯೋಜನೆ ಇದೆ. ಇದು ವರೆಗಿದ್ದ ಬಾಲಬೋಧೆಗಳಿಗಿಂತ ಈ ಬಾಲಬೋಧೆಯು ಉತ್ತಮವಾದುದೆಂದು ನನ್ನ ಭಾವನೆ.

ಪುಸ್ತಕದ ರಚನೆ ಮೈಕಟ್ಟು ಎಲ್ಲವೂ ಅಂದವಾಗಿದೆ.

WANTED.

Candidates for Electrical Courses. Highest Successes in London Guilds examinations. Railfare paid. Rules on 3 anna stamps.

TECHNICAL INSTITUTE OF INDIA LTD., WARLI, Bombay, 18.

6—6

ಬೊಂಬಾಯಿಯಲ್ಲಿ ಪುನಹ ಗಲಭೆ.

ಬೊಂಬಾಯಿಯಿಯಲ್ಲಿ ಈ ತಾ. 8ರಲ್ಲಿ ಸಾಯಂಕಾಲ ಪುನಹ ಗಲಭೆಯೂಯಿತು. ಗಲಭೆಯು ಅಂಥಿಂಥದ್ದಲ್ಲ; ಹಿಂದೂ—ಮುಸ್ಲಿಂ! ಹಿಂದಿನ ಗಲಭೆಯ ರಕ್ಕವು ನೆಲದಿಂದ ಕೊಚ್ಚಿ ಹೋಗುವಷ್ಟರಲ್ಲೇ ಪುನಹ ರಕ್ಕಪಾತ! ಗಲಭೆಯ ಕಾರಣವಿದಿಷ್ಟು—ನಳ್ ಬಜಾರಿನಲ್ಲಿ ಕ್ರಿಕೆಟ್ ಆಡುತ್ತಿದ್ದನೊಬ್ಬ ಹಿಂದೂ ಬಾಲಕ. ಸವಿೂಪದಲ್ಲಿ ಹೋಗುತ್ತಿದ್ದನೊಬ್ಬ ಪಠಾಣ ದಿಂಡ. ಈ ಹುಡುಗನು ಬೀಸಿದ ಒಂದು ಚೆಂಡು ಆ ಪಠಾಣನಿಗೆ ತಗಲಿತು. ಪಠಾಣನು ರೇಗಿದನು. ರೇಗಿ ಓಡಿ ಹೋಗುತ್ತಾ ಕ್ರಿಕೆಟ್ ರಂಗವನ್ನು ಪ್ರವೇಶಿಸಿ ಆಡುತ್ತಿದ್ದ ಬಾಲಕನನ್ನು ಹಿಡಿದೆಳೆದು ಹೊಡೆದನು! ಇತರ ಬಾಲಕರು ಅಲ್ಲಿ ಆಡುತ್ತಿದ್ದವರು ಪಠಾಣನ ಈ ಅತ್ಯಾಚಾರಕ್ಕಾಗಿ ಬಿರುನುಡಿಗಳನ್ನಾಡಿದರು. ಕೆಲವು ಪ್ರಾಯಸ್ಥ ಹಿಂದೂಗಳೂ ಇದನ್ನು ನೋಡುತ್ತಾ ಇದ್ದರು. ಪಠಾಣನು ಅಲ್ಲಿಂದ ಹೋದನು; ಹೋದವನೇ ಪುನಹ ಮರಳಿದನು. ಒಬ್ಬಿಂಟಿಗನಾಗಿ ಅಲ್ಲ; ಜಬ್ಬಯಲ್ಲಿ ಅನೇಕ ಮುಸ್ಲಿಂ ಹೋದ್ಧರಿದ್ದರು. ಮುಸ್ಲಿಂರೊಡನೆ ಲಾತಿಗಳೂ ಸಿದ್ದವಾಗಿದ್ದವು ಹುಡುಗರ ಮೆಟ್ಟುಗಳು ಬಿದ್ದವು. ಆ ಪಠಾಣರೊಳಗಿನ ಇತರ ಹಿಂದೂಗಳು ನಿಸ್ಸಾಹಾಯ ಹುಡುಗರ ರಕ್ಷಣೆಗಾಗಿ ಬಂದರು. ಪ್ರಾರಂಭವಾಯಿತು ಯುದ್ಧಕ್ಕೆ! ಕಲ್ಲು, ಕತ್ತಿ, ಬಾಟಲಿ ತುಂಡು, ಇತ್ಯಾದಿ ಹತ್ಯಾಸಾಧನಗಳು ಅತ್ಕಿತ್ಕ ಗಾಳಿಯಲ್ಲಿ ಸಂಚಾರ ಮಾಡಿದವು. ಇತ್ಕಂಡಗಳಲ್ಲಿಯೂ ಗಾಯಗಳಾದವು. ಟ್ರೇಮ್ ಬಂಡಿಗಳಲ್ಲಿ ಹೋಗುತ್ತಿದ್ದವರಿಗೂ ಪೆಟ್ಟು ಜೀಳಲಾರಂಭವಾಯಿತು ಆಸುಪಾಸಿನ ಅಂಡಿಗಳ ಕನ್ನಡಿ ಬಾಗಿಲುಗಳೂ, ಲಾಟಾನು ಕಂಬಗಳೂ ಚೂರಾದವು. ಇದನ್ನು ನೋಡಿ ಗಾಡಿ ಚಲಾವಣೆಯು ಈ ಪಟಾರದೊಳಗೆ ಬರುತಿದ್ದುದು ನಿಂತು ಹೋಯಿತು. ಟ್ರೇವ್ ಒಂಡಿಯಲ್ಲಿದ್ದ ಒಬ್ಬ ಪಾರ್ಸಿ ಗೃಹಸ್ಥನಿಗೂ ಪೆಟ್ಟು ಬಿತ್ತು. ಹಿಂದೂಗಳ ವೇಷದಲ್ಲಿದ್ದ (ಗಲಭೆಗೆ ಮೊದಲಾಗುವಾಗಲೇ ಹಿಂದೂಗಳ ವೇಷಾಕು ಧರಿಸಿ ವೇಷಗಳು ಹೊರಡುವುದಿದೆ!) ಇಬ್ಬರು ಮುಸ್ಲಿಮರನ್ನು ಹಿಂದೂಗಳೆಂದು ಭಾವಿಸಿ ಮುಸ್ಲಿಮರೇ ಸಂಕ್ಕನೆ ತಿವಿದು ಕೊಂದೇಬಿಟ್ಟರು! ಒಬ್ಬ 'ತಾಜಾ' ಹಿಂದೂವನ್ನೂ ಕೊಂದರು! ಅಷ್ಟಾಗುವಾಗ ಶಸ್ತ್ರ ಪೊಲೀಸರು ಓಡಿಬಂದರು. ಗಲಭೆಗಾರರನ್ನು ಜದರಿಸಿ ತಾವು ಪಹರೆಗೆ ನಿಂತರು.

ಗಲಭೆ ನಡೆದುದು ಒಟ್ಟು ಅರ್ಧ ಗಂಟೆ ಅಷ್ಟು ಅವಧಿಯಲ್ಲಿ ೩ ಜನರ ಕೊಲೆ; ೨೩ ಜನರಿಗೆ ಆಸ್ಪತ್ರೆಯಲ್ಲಿ ವಿರಾಮ.

ಈಗ ಗಡಿಬಿಡಿಯೇನೂ ಇಲ್ಲವೆಂದು ತಿಳಿದು ಬರುತ್ತದೆ.

ಮೌಲಾನ್ ಶೌಕತ್ ಅಲಿಯವರು:

ಇವರು ಈಗ ಅಮೇರಿಕದಲ್ಲಿ ಪತ್ನೀಯುತರಾಗಿ ಸಂಚರಿಸುತ್ತಿದ್ದಾರೆ. ಚಿಕಾಗೋ ನಗರದಲ್ಲಿ ಅವರು ತಾ. 9ರಲ್ಲಿ ನೂರಾರು ಮುಖಂಡರಿಗೆ 'ಗಾಂಧಿಯವರೊಡನೆ ಕಲಹ ಏಕೆ ಮಾಡಿದುದೇತಕೆ?' ಎಂದು ವಿವರಿಸಿದರು' ಶಾಸನೋಲ್ಲಂಘನೆಗೆ ಅವರು ತೊಡಗಿದುದೇ ನನ್ನೊಡನೆ ಅವರು ಬೇರೆಯಾಗಿರಬೇಕು. ಅಂಥಾ ಅದ್ಭುತ ಪುರುಷನಿಲ್ಲ. ಅತಿ ಸುಲಭವಾದುದನ್ನು ಅವರು ಕಠಿಣವಾಗಿ ತೊಡಗುವುದೊಂದು ಅವರ ಕುಂದು. ಅಭಿಸಂಧಿಯ ಕಾಲದಲ್ಲಿ ಅವರು ಭೃಮೆ ಹೊಂದಿ ಕರ್ತವ್ಯ ಮೂಢರಾಗಿರುವರು. ಮದ್ರಾಸಿನಲ್ಲಿ ಹಿಂದೂ—ಮುಸ್ಲಿಮರು ಐದು ವರ್ಷಗಳ ಹಿಂದೆ ಸೇರಿ ಮಾಡಿದ ಏರ್ಪಾಡನ್ನು ಅವರು ಅಂಗೀಕರಿಸಿದ್ದರೆ, ದೇಶದಲ್ಲಿ ತುಂಬಾ ಶಾಂತಿಯು ಎಂದೋ ಉಂಟಾಗುತ್ತಿತ್ತು. ಇಂಗ್ಲೆಂಡು ಇಂಡಿಯಗಳೊಳಗೆ ಎರಡು ವರ್ಷಗಳ ಹಿಂದೆಯೇ ಒಪ್ಪಂದವಾಗುತ್ತಿತ್ತು. ಹಿಂದುಗಳ ಬೆಂಬಲವನ್ನು ನಂಬಿ ಇವರು ಇತರ ರೀತಿಯ ಒಪ್ಪಂದಗಳಿಗೆ ಒಪ್ಪಲಿಲ್ಲ. ಹೀಗಾಗಿ ಎಲ್ಲವೂ ಸಂಶಯಕ್ಕೆಡೆಯಾಗಿ ಉಳಿದಿದೆ .... ಈಗಲೂ ಗಾಂಧಿಜೀಯವರನ್ನು ಹೊರಬಿಟ್ಟರೆ, ಶಾಂತಿಯೂಗುವ ಸಂಭವಗಳು ಹೆಚ್ಚಾಗಿವೆ ....ನ ಮ್ಮೊಳಗಣ ಸಾಮಾಜಿಕ ಕಲಹಗಳ ನೆವದಿಂದ ನಾವು ಆಳಲು ಯೋಗ್ಯರಲ್ಲವೆನ್ನುವವರು ಸುಳ್ಳಾಡುತ್ತಾರೆ .... ಉಪವಾಸವ್ರತ ಆತ್ಮಘಾತವಾಗಿದೆ ....' ಇತ್ಯಾದಿಯಾಗಿ ವಿವರಿಸಿದ್ದಾರೆ.

'ಕಂತೀರವ'

ಸೆಂಟ್ರಲ್ ಬ್ಯಾಂಕು ವಿೂಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ವಿೂಟಿಂಗು ತಾ. 16-1-1933ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. 1. ರಾವ್‌ಬಹದ್ದೂರ್ ಪಿ. ದೇವೈಯ್ಯನವರು (ಪ್ರೆಸಿಡೆಂಟರು) 2. ಮೆ. ಗಳಾದ ಯಸ್. ಬಿ. ಸೋಮಯ್ಯನವರು, ಯಂ. ಯಲ್. ಸಿ. 3. ಕೊಂಗಂಡ ಗಣಪತ್ಕಯವರು, ಯಂ. ಯಲ್. ಸಿ. 4. ಪಿ. ಎ. ಚಂಗಪ್ಪನವರು ಯಂ. ಯಲ್. ಸಿ. 5. ಪುತ್ಕಮನೆ ಮುದ್ದವೈಯ್ಯನವರು, 6. ಕೊಡಂದೇರ ದೇವೈಯ್ಯನವರು, 7. ಯಸ್. ಯನ್. ರಾಮಶೆಟ್ಟು, 8. ಉದಿಯಂಡ ಮಾಚೈಯ್ಯನವರು, 9. ಕೋಡಿರ ತಿಮ್ಮೈಯ್ಯನವರು, 10. ಪುಚ್ಚಿಮಾಡ ಮಾದೈಯ್ಯನವರು, ಮತ್ತು 11. ಮನೆಯಪಂಡ ಯಂ. ಬೆಳ್ಯಪ್ಪನವರು (ಗೌರವ ಸೆಕ್ರೆಟರಿ ಮತ್ತು ಟ್ರೆಜರರ್), ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರಾಜರು ಆಗಿದ್ದರು. ಮೆ. ಗಳಾದ 1. ಎ. ಬಿ. ಚಂಗಪ್ಪನವರು ಯಂ. ಯಲ್. ಸಿ. 2. ಕೆ. ಎನ್. ಸುಬ್ರಾಯರು, 3. ಕೋಟೆರ ಪಿ. ಚಿಣ್ಣಪ್ಪನವರು ಮತ್ತು 4. ಯಸ್. ಬಸಪ್ಪನವರು.

1. ಕಳೆದ ವಿೂಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಡಿಸೆಂಬರ್ ತಿಂಗಳ ಜಮೊ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ನವೆಂಬರ್ ತಿಂಗಳ ಸಿಲ್ಕು	ರೂ.	3625—12—11
ಈ ತಿಂಗಳಲ್ಲಿ ವಸೂಲಿ	ರೂ.	7892—11—0
ಜುಮ್ಲೆ	ರೂ.	11518—7—11
ಈ ತಿಂಗಳಲ್ಲಿ ಖರ್ಚು	ರೂ.	2470— 0—0
ಸಿಲ್ಕು—	ರೂ.	9048—7—11

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. 1. ಕೆರೆಹಳ್ಳಿ ಸೊಸೈಟಿಗೆ ರೂ. 1000, 2. ನೀರುಗುಂದ ಸೊಸೈಟಿಗೆ ರೂ. 1000 ಮತ್ತು 3 ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000.

4. ಅಮ್ಮತ್ತಿ ಟೌನ್ ಸೊಸೈಟಿಯ ಸಾಲದ ಅರ್ಜಿ ಕಾರಣಾಂತರದಿಂದ ಮಂಜೂರ್ಮಾಡಲಿಲ್ಲ.

5. $\frac{1931}{1932}$ನೇ ಸಂವತ್ಸರದ ಡೈರೆಕ್ಟರುಗಳ ಕರಡು ರಿಪೋರ್ಟು ಓದಿ ಮಂಜೂರ್ಮಾಡಲಾಯಿತು.

6. ಪಾಡಿನಾಲ್ಕುನಾಡು ಸ್ವೀಪರ್ಸಿನವರು ಮತ್ತು ಬಿಳುಗುಂದ ಸೊಸೈಟಿಯವರು ತಾವು ಬ್ಯಾಂಕಿಗೆ ಪಾವತಿ ಮಾಡಲು ಬಾಕಿರುವ ವಾಯಿದೆ ವಿಂದ ಸಾಲವನ್ನು ಮರುಪಾವತಿ ಮಾಡಲು ತಾ. 31—3—1933ರ ವರೆಗೆ ವಾಯಿದೆ ಕೊಡಬೇಕಾಗಿ ಬರಕ್ಕೊಂಡ ಅರ್ಜಿಗಳನ್ನು ಓದಲಾಯಿತು.

ವಾಯಿದೆ ಕೊಡಲು ಆಗುವುದಿಲ್ಲವೆಂತ ತೀರ್ಮಾನವಾಯಿತು.

7. ಮೆ. ಯಸ್. ಯನ್. ರಾಮಮೂರ್ತಿಯವರು ತನ್ನ ತಂದೆ ಲೇಟ್ ಶಂಕರನಾರಣೈಯ್ಯನವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಹಣವನ್ನು ತನ್ನ ಹೆಸರಿಗೆ ವರ್ಗಾಯಿಸಬೇಕೆಂತ ಬರಕೊಂಡ ಪತ್ರ ಮತ್ತು ಪೌತನ ಹೆಂಡತಿ ಮೆಜಾರ್ಟಿಗೆ ಬಂದ ಮಗನ ಒಪ್ಪಿಗೆ ಪತ್ರ ಸಹ ಓದಲಾಯಿತು.

ಪೌತಿ ಲೇಟ್ ಶಂಕರನಾರಣೈಯ್ಯನವರ ಹೆಸರಿನಲ್ಲಿರುವ ಡಿಪಾಜಿಟ್ಟು ಹಣವನ್ನು ಮೆ. ಯಸ್. ಯಸ್. ರಾಮಮೂರ್ತಿ ಬಿ. ಎ. ಬಿ ಎಲ್. ರವರ ಹೆಸರಿಗೆ ವರ್ಗಾಯಿಸಬಹುದೆಂತ ತೀರ್ಮಾನವಾಯಿತು.

8. ಮೆ. ಗಳಾದ ಎ. ಯಂ. ಲಕ್ಷ್ಮಿನಾರಾಯಣನವರು ಮತ್ತು ಶೀತರಾಮನವರು ಪೌತಿ ತಮ್ಮ ತಂದೆ ಎ ಯಸ್. ಮಂಜೈಯ್ಯನವರ ಹೆಸರಿನಲ್ಲಿರುವ 1 ಶೇರಿನ ಬಾಪ್ತು 10 ರೂಪಾಯಿನ್ನು ತಮ್ಮ ತಂದೆ ಪೌತರಾದ್ದರಿಂದ ಹಿರಿಯವನಾದ ಶೀತರಾಮನವರು ತನಗೆ ವಾಪಸು ಕೊಡಬೇಕಾಗಿ ಬರಕ್ಕೊಂಡ ಅರ್ಜಿ ಓದಲಾಯಿತು.

ಪೌತ ಮಂಜೈಯ್ಯನವರ ಬಾಪ್ತು ಬ್ಯಾಂಕಿನಲ್ಲಿರುವ 1 ಶೇರಿನ ಹತ್ತು ರೂಪಾಯಿ ಪೌತನ ಹಿರಿಮಗ ಮೆ. ಶೀತರಾಮನವರಿಗೆ ವಾಪಸು ಕೊಡಬಹುದೆಂತ ತೀರ್ಮಾನವಾಯಿತು.

9. ಸೆಂಟ್ರಲ್ ಬ್ಯಾಂಕಿನ ಕಬ್ಬಿಣದ ಪೆಟ್ಟಿಗೆಯನ್ನು (Iron Safe) ಬ್ಯಾಂಕಿನ ಜವಾಬ್ದಾರಿಕೆಯೇಗೆ ಬಜಾಜಿನ ರೂಮಿನಿಂದ ಸಾಗಿಸುವುದರ ಬದಲು ಅಲ್ಲಿಯೇ ಇಟುಕೊಳ್ಳಬಹುದಾಗಿ ಕೊಡಗು ಕಮಿಶನರವರಿಂದ ಬಂದ ನಂಬರು $\frac{1435}{32}$ ತಾ. 11—1—33ರ ಪತ್ರ ಓದಲಾಯಿತು.

ಈ ಬಾಬಿನಲ್ಲಿ ಡೈರೆಕ್ಟರುಗಳು ಬ್ಯಾಂಕಿನ ಪರವಾಗಿ ವಂದಿಸಿ ಪತ್ರ ಬರೆಯಬೇಕಾಗಿ ತೀರ್ಮಾನವಾಯಿತು.

10. ಸೋವ. ವಾರಸೇಟಿ ನೋಟಿಫೈಡ್ ಎಕ್ಸ್‌ಚೆಂಜ್ ಪ್ರೈಸಿಡೆಂಟರು ಬ್ಯಾಂಕಿನಲ್ಲಿ 6000 ರೂ. ಡಿವಾಜಿಟ್ಟು ಇಟ್ಟುಕೊಳ್ಳಬೇಕೆಂತ ಬರಕೊಂಡ ಪತ್ರ ಓದಲಾಯಿತು.

ಮೇಲ್ಕಂಡ 6000 ರೂಪಾಯಿಗಳನ್ನು ಶೇಕಡ 4ರ ಪ್ರಕಾರ ಬಡ್ಡಿಯಲ್ಲಿ ಹೊಂದಿಕೊಳ್ಳಬಹುದೆಂತ ತೀರ್ಮಾನವಾಯಿತು.

11. ತಾ. 26—9—1931ರ ಡೈರೆಕ್ಟರುಗಳ ವಿೂಟಿಂಗಿನಲ್ಲಿ 35 ರೂಪಾಯಿಗೆ ಒಂದು ಗಡಿಯಾರವನ್ನು ಬ್ಯಾಂಕಿನ ಉಪಯೋಗಕ್ಕೆ ತೆಗೆದುಕೊಳ್ಳಬಹುದೆಂತ ತೀರ್ಮಾನವಾದ ಮೇರೆ 38—14—0 ಆಣೆಗೆ ತೆಗದುಕೊಂಡದ್ದರಿಂದ ಹೆಚ್ಚಿಗೆ ಖರ್ಚು ಮಾಡಿದ 3—14—0ಯನ್ನು ಮಂಜೂರು ಮಾಡಲಾಯಿತು.

12. 1932—33ನೇ ಸಂವತ್ಸರಕ್ಕೆ ತಯಾರಿಸಿದ ಅಂದಾಜು ಬಜೆಟ್ಟನ್ನು ಪ್ರಿಂಟು ಮಾಡಿ ಡೈರೆಕ್ಟರುಗಳ ರಿಪೋರ್ಟಿನೊಂದಿಗೆ ಎಲ್ಲಾ ಸೊಸೈಟಿಗಳಿಗೂ ಬಿಡು ಮೆಂಬರುಗಳಿಗೂ ಕಳುಹಿಸಬೇಕೆಂತ ತೀರ್ಮಾನವಾಯಿತು.

13. ಇನ್ನು ಮುಂದೆ ಟೌನ್ ಸೊಸೈಟಿಯವರು ಸಾಲದ ಅರ್ಜಿಗಳನ್ನು ಬ್ಯಾಂಕಿಗೆ ಕಳುಹಿಸುವಾಗ ಸಾಲಕ್ಕೆ ಜಡಕೊಂಡ ಅರ್ಜಿದಾರರ ಪೂರ್ತಿ ಮನೆಯ ಹೆಸರು ಸಾಲದ ಉದ್ದೇಶ ವಗೈರೆ ಇತರ ಎಲ್ಲಾ ದಾಕ್ಲೆಗಳನ್ನು ಬರೆದು ಕಳುಹಿಸಬೇಕೆಂತ ತೀರ್ಮಾನವಾಯಿತು.

14. ಬ್ಯಾಂಕಿನ ಸಂಘಗಳ ಮೇಲ್ವಿಚಾರಣೆ ವಿಷಯ ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಗೆ ನಂಬರು 575 ತಾ. 28—11—1932ರ ಪತ್ರ ಬರಕೊಂಡದಕ್ಕೆ ಸದರಿ ರಿಜಿಸ್ಟ್ರಾರವರು ಕೊಯಮತ್ತೂರು ಡಿಪ್ಟಿ ರಿಜಿಸ್ಟ್ರಾರವರಿಂದ ಬಂದ ಪತ್ರದ ನಕ್ಕಲು ಸಮೇತ ನಂಬರು 703 ತಾ. 8—1—33ರ ಪತ್ರ ಕಳುಹಿಸಿದ್ದನ್ನು ಓದಲಾಯಿತು.

ಬ್ಯಾಂಕಿನ ಸಂಘಗಳ ಮೇಲ್ವಿಚಾರಣೆ ಮತ್ತು ದ್ರವ್ಯ ಸಹಾಯ ಮಾಡುವ ಕೆಲಸಗಳನ್ನು ಒಂದಾಗಿ ಸೇರಿಸುವ ಉದ್ದಿಶ್ಯ ಬ್ಯಾಂಕಿನ ಬೈಲಾಗಳನ್ನು ತಿದ್ದುಪಡಿಯಿಂದ ಹೊಸ ಉಪನಿಬಂಧನೆಗಳನ್ನು ತಯಾರಿಸುವ ಬಗ್ಗೆ ರಾ. ಬಾ. ಪಿ ದೇವಯ್ಯನವರು, ಮೆ. ಗಳಾದ ಯಂ. ಯಂ. ಬೆಳ್ಯಪ್ಪನವರು, ಕೆ. ಸಿ. ದೇವಯ್ಯನವರು ಯಸ್. ಯನ್. ರಾಮಶೆಟ್ಟು ಮತ್ತು ಯನ್. ಬಿ. ಸೋಮಯ್ಯನವರು ಯಂ. ಯಲ್. ಸಿ. ಇವರಿಂದ ಕೂಡಿದ ಉಪ ಕಮಿಟಿಯನ್ನು ನೇಮಕ ಮಾಡಿ, ಸದರಿ ಕಮಿಟಿಯವರು ಮೇಲ್ಕಂಡ ಮೇರೆ ಉಪನಿಬಂಧನೆಗಳನ್ನು ತಯಾರಿಸಿ ತಾ. 28—1—33ರಲ್ಲಿ ನಡೆಯುವ ಡೈರೆಕ್ಟರುಗಳ ವಿೂಟಿಂಗಿನಲ್ಲಿ ಇಡುವಂತೆ ತೀರ್ಮಾನವಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು)

ವಿಮರ್ಶೆ.

'The English Tutor'—ಆಂಗ್ಲ ಅಶಾನು ಎಂಬ ಹೆಸರಿನ ಆಂಗ್ಲ ಬೋಧಿನಿಯೊಂದು ಈಗ ತಾನೇ ಮುದ್ರಣ ಶಾಲೆಯಿಂದ ಹೊರ ಹೊರಟಿರುವುದು. ಇಂಗ್ಲಿಷ್ ಭಾಷೆಯನ್ನು ಕಲಿಯು ತೊಡಗುವ ಪ್ರತಿಯೊಬ್ಬನೂ ಇದರ ಪರಿಚಯವನ್ನು ಮಾಡಿಕೊಳ್ಳಬೇಕಾದು ಅತ್ಯಾವಶ್ಯಕ.

ಆಂಗ್ಲ ಅಶಾನುವು ಹಲವು ಭಾಷೆಗಳಲ್ಲಿ ಪರಿಜ್ಞಾನವುಳ್ಳ ಮಹನೀಯರಿಂದ ಬರೆಯಲಿಲ್ಪಟ್ಟಿದೆ. ಇದರಲ್ಲಿ ಒದಗಿಸಿರುವ ಬೋಧನಾ ಕ್ರಮವು ಶ್ಲಾಘನೀಯವಾಗಿದೆ. ಇಂಗ್ಲಿಷ್ ವರ್ಣಮಾಲೆಯಿಂದ ಪ್ರಾರಂಭಿಸಿ ಎರಡಕ್ಷರ, ಅನಂತರ ಮೂರಕ್ಷರ, ಹೀಗೆಯೇ ದೊಡ್ಡ ದೊಡ್ಡ ಶಬ್ದಗಳನ್ನು ಕಟ್ಟಿ ಉಚ್ಚರಿಸುವ ಕ್ರಮವನ್ನು ಬೋಧಿಸಿ ಅವುಗಳ ಸರಿಯಾದ ಅರ್ಥಗಳನ್ನು ವಿದ್ಯಾರ್ಥಿಯ ಮನದಟ್ಟುವಂತೆ ಈ ಪುಸ್ತಕದಲ್ಲಿ ತಿಳಿಯಪಡಿಸಿದ್ದಾರೆ. ಇದಾದನಂತರ ಒಂದೊಂದೇ ಶಬ್ದದ ಜೋಡನೆಯಿಂದ ವಾಕ್ಯ ರಚನೆಯನ್ನು ತೋರಿಸಿ ಮೆಲ್ಲ ಮೆಲ್ಲಗೆ ಇವರೊಡನೆಯೇ ಇಂಗ್ಲಿಷ್ ವ್ಯಾಕರಣದ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ.

ಹೀಗೆ ವಾಕ್ಯ ರಚನೆ, ವ್ಯಾಕರಣ ಮುಂತಾದುವುಗಳ ಪರಿಚಯವು ಕ್ರಮವಾಗಿ ಆಯಿತೆಂದಮೇಲೆ ಶಬ್ದಗಳ ಅರ್ಥವನ್ನು ತಿಳಿಸುವ ಕ್ರಮವನ್ನು ಮಾಡಿದ್ದಾರೆ, ಅದರಲ್ಲಿ ಒಂದೇ ಜಾತಿಯ ಪದಗಳನ್ನೆಲ್ಲಾ ಒಕ್ಕಡೆಯೆ ಸೇರಿಸಿ ಕಲಿಯುವನಿಗೆ ಸ್ವಲ್ಪವೂ ತೊಂದರೆಯೂಗದಂತೆ ಎಚ್ಚರಿಕೆಯಿಂದ ನೋಡಿಕೊಂಡಿದ್ದಾರೆ. ಅನಂತರ ಸಂಭಾಷಣೆ, ಚಿಕ್ಕ ಕಥೆಗಳನ್ನು ಕಟ್ಟುವರು, ಸಣ್ಣ ಸಣ್ಣ ಪ್ರಬಂಧಗಳನ್ನು ಬರೆಯುವುದು, ಇವೇ ಮೊದಲಾದ ಭಾಷಾಭಿವೃದ್ಧಿಯ ಸಾಧನೆಗಳನ್ನು ಕಲ್ಪಿಸಿ ವಿಧಾನಗಳನ್ನು ತೋರಿಸಿ ಕೊಡುವ ಏರ್ಪಾಡಿದೆ. ಅಲ್ಲಲ್ಲಿ ಪ್ರಶ್ನೆಗಳನ್ನು ಚಾತುರ್ಯದಿಂದ ಕೇಳಿ ವಿದ್ಯಾರ್ಥಿಯ ತಿಳಿವಳಿಕೆಗೆ ಸಹಾಯಗಳನ್ನು ಮಾಡಿದ್ದಾರೆ.

ಭಾಷೆಯನ್ನು ಬೋಧಿಸುವ ಕ್ರಮವನ್ನು ಮಾತ್ರವೇ ಈ ಪುಸ್ತಕವು ಒಳಗೊಂಡಿರುವುದಲ್ಲ. ಇದಲ್ಲಿ ಇಂಗ್ಲಿಷ್ ಶಬ್ದ ನಿಘಂಟೂ (Dictionary) ವಿಶ್ವ ವಿಷಯ ನಿಘಂಟೂ (Encyclopeadia) ಕಕ್ಕಾಷ್ಟು ವಿಶದ ರೀತಿಯಲ್ಲಿ ಸೇರಿಕೊಂಡಿದೆ. ಮನುಷ್ಯನಿಗೆ ವ್ಯವಹಾರದಲ್ಲಿ ಉಪಯೋಗಕ್ಕೆ ಬರುವ ಎಲ್ಲಾ ವಿಷಯಗಳನ್ನು ಈ ಪುಸ್ತಕವು ತಿಳಿಸುತ್ತದೆ.

ಈ ವರೆಗೆ ನಮಗೆ ಇಷ್ಟು ಉತ್ಕೃಷ್ಟವಾದ ಆಂಗ್ಲ ಬೋಧಿನಿಯು ದೊರಕಿಲ್ಲ. ಷಡಕ್ಷರಿಯವೆಂಬ ಒಂದು ಚಿಕ್ಕ ಪುಸ್ತಕವು ಅಲ್ಲಲ್ಲಿ ಪ್ರಚಾರದಲ್ಲಿ ಇದೆ. ಆದರೆ ಷಡಕ್ಷರಿಯವು ಈ ದೊಡ್ಡ ಪುಸ್ತಕದಲ್ಲಿ ಒಂದು ಭಾಗವಾಗಿ ಸೇರಿಕೊಳ್ಳಲೂ ಸಹ ಸರಿಯಾಗಿರುವುದಿಲ್ಲ. ನಮಗೆ ದೊರಕಿರುವ ಆಂಗ್ಲ ಅಶಾನುವು ಸುಮಾರು 900 ಪುಟಗಳುಳ್ಳ ದೊಡ್ಡ ಪುಸ್ತಕ ಇದರ ಬೆಲೆ 2/—ರೂಪಾಯಿ ಇಂಗ್ಲಿಷ್ ಭಾಷೆಯನ್ನು ಕಲಿಬೇಕೆಂದು ಕುತೂಹಲವುಳ್ಳ ಪ್ರತಿಯೊಬ್ಬನಿಗೂ ಈ ಪುಸ್ತಕವು ಉತ್ತಮವಾದ ಗುರುವಿನಂತೆ ಶಿಕ್ಷಣವನ್ನು ಕೊಟ್ಟು ಭಾಷಾ ಪರಿಚಯವನ್ನು ತಕ್ಕಷ್ಟು ಜಾಗ್ರತೆ ಮಾಡಿಕೊಡುವುದರಲ್ಲಿ ಸಂದೇಹವಿಲ್ಲ. ಪುಸ್ತಕದ ಅಚ್ಚು, ಮೈಕಟ್ಟು ಜಲೋದಾಗಿದೆ.

ಈ ಪುಸ್ತಕವು ಮದ್ರಾಸಿನ ಮಿಂಟ್ ಸ್ಟ್ರೀಟ್‌ನಲ್ಲಿರುವ ಅಮೃತ ಗುಣಬೋಧಿನಿ ಆಫೀಸಿನಲ್ಲಿ ದೊರಕುವುದು.

Wanted.

Assets 17500000 Exeeeds. | Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO., LTD., Calcutta. (Est. 1906.)

Please apply to—

CHIEF ORGANISER,
National Insurance Co., Ltd.,
Arcot Srinivas Char St.,
12—4 Bangalore City.

ವರ್ತಮಾನ ಸಂಗ್ರಹ.

ಒಳ ದೇ ಶ.

ಈ ವಾರ ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 222 ಕ್ರಯ ವಿರುವದಾಗಿ ತಿಳಿಯುತ್ತೇವೆ.

ತಾ. 23—1—1933 ಕ್ಕೆ ಇಟ್ಟಿದ್ದ ಮಡಿಕೇರಿ ಮುನ್ಸಿಪಲ್ ಮೆಂಬರುಗಳ ಚುನಾವಣೆಯನ್ನು ಫೆಬ್ರವರಿ ತಾ. 7 ಕ್ಕೆ ಮುಂದರಿಸಿದೆಯೊಗಿ ತಿಳಿಯುತ್ತೇವೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ಇದೇ ಶನಿವಾರ ತಾ. 28—1—33 ರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ತಾ. 25—1—33 ರಲ್ಲು 11 ಗಂಟೆಗೆ ಮಡಿಕೇರಿ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನ ರೂಮಿನಲ್ಲಿ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಜನರಲ್ ಮೀಟಿಂಗು ಜರಗುವುದಾಗಿ ವರ್ತಮಾನ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮೆಟ್ರಿಕ್ಯುಲೇಶನಿನ ಸಿಲೆಕ್ಷನ್‌ನಲ್ಲಿ ಒರಿಪ ಮೊರ್ಜಿನ ಪಬ್ಲಿಕ್ ಪರೀಕ್ಷೆಗೆ 48 ವಿದ್ಯಾರ್ಥಿಗಳ ಪೈಕಿ ಬರೀ 27 ವಿದ್ಯಾರ್ಥಿಗಳನ್ನು ಚುನಾಯಿಸಿರುವರಾಗಿ ತಿಳಿಯುತ್ತೇವೆ.

'ಕೊಡಗು" ಪತ್ರಿಕೆಯ ಸಂಪಾದಕರಾಗಿದ್ದ ಮೆ. ಪಿ. ಐ. ಬೆಳ್ಯಪ್ಪನವರು ರಾಜಕೀಯ ವಿಷಯದ ಸಂಬಂಧವಾಗಿ ಜೈಲುವಾಸವನ್ನು ಕೈಕೊಂಡಿರುವುದರಿಂದ ಮೆ. ಮೂಡಿಮಂಡ ಯಂ. ಗಣಪತಿಯವರನ್ನು ಇವರ ಬದಲಿಗೆ ನೇಮಿಸಲಾಗಿದೆ.

ಇದೇ ಜನವರಿ ತಾ. 30 ನೇ ಸೋಮವಾರ ದಿನವನ್ನು ಪೊನಂಪೇಟೆಯ ಸಂತೆಯ ದಿನವಾಗಿ ಆಚರಿಸತಕ್ಕದೆಂದೂ, ವ್ಯಾಪಾರಸ್ಥರೆಲ್ಲರೂ, ಮೂರಾಟಕ್ಕೆ ತಂದ ಸಾಮಗ್ರಿಗಳನ್ನು ಗೋಣಿಕೊಪ್ಪಲು ಸಂತೆಯ ದರದಲ್ಲಿ ಬಿಕ್ರಿಮಾಡುವಂತೆ ಒಪ್ಪಿರುವರೆಂದೂ ತಿಳಿಯುತ್ತೇವೆ.

ಮೆ ಮೇರಿಯಂಡ ಮೊದಪ್ಪ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲು ತಾ. 18—1—1933 ನೇ ಬುಧವಾರ ಕೊಡಗು ಜಮೊನ್ನಾರ್ರರ ಸಂಘದ ಹಾಲ್‌ನಲ್ಲು ಮಡಿಕೇರಿ ವೇದಾಂತ ಸಂಘದವರ ಆಶ್ರಯದಲ್ಲಿ ಶ್ರೀ. ಸ್ವಾಮಿ ವಿವೇಕಾನಂದರವರ ಜಯಂತುತ್ಸವವು ನಡೆಯಿತು

"ಕೊರವಂಡ ಕಾರ್ಯಪ್ಪ" ಮೆಮೋರಿಯಲ್ ಹಾಕಿಟೂರ್ನಮೆಂಟು ಈ ತಾ. 25 ನೇ ಬುಧವಾರ ಪ್ರಾರಂಭವಾಗುವುದು. ಮೊದಲನೆಯ ಆಟವು ಸ್ಕೂಲಿನ 'ಎ' ಮತ್ತು 'ಬಿ' ಟೀಮಿನವರಿಗೆ ಸಾಯಂಕಾಲ 5 ಗಂಟೆಗೆ ನಡೆಯುವುದು. ಒಟ್ಟು, ಈ ಟೂರ್ನಮೆಂಟಿಗೆ 6 ಟೀಮುಗಳು ಭಾಗಿಗಳಾಗಿವೆ.

ಮಡಿಕೇರಿ ಮುನಿಸಿಪಾಲಿಟಿ ಕಮಿಟಿಯ ಕೊಡವರ ಮೂರು ಸೀಟಿಗೆ ಮೆ. ಗಳಾದ ಐ. ಸಿ. ಸುಬ್ಬಯ್ಯನವರು ಯಂ. ಎ. ಬಿ. ಎಲ್. ಮೇರಿಯಂಡ ಮೊದಪ್ಪನರು ಬಿ. ಎ. ಬಿ. ಎಲ್. ಕೊಡಂದೆರ ಮೊದಪ್ಪನವರು, ಮಂಡೇಪಂಡ ಅಪ್ಪಚ್ಚನವರು ಮತ್ತು ಮನೆಯಪಂಡ ಬೆಳ್ಯಪ್ಪನವರೂ, ಉಮೇದ್ವಾರರಾಗಿ ನಿಂತಿರುವದಾಗಿ ತಿಳಿಯುತ್ತೇವೆ.

ಹಿಂದುಗಳ ಆರು ಸೀಟಿಗೆ ಮೆ. ಗಳಾದ ಯಸ್. ಸೋಮಣ್ಣನವರು, ಯಸ್. ಮಲ್ಲಪ್ಪನವರು, ಆರ್. ಯಂ ಕಪನಯ್ಯನವರು, ಕೆ. ಕಪನಯ್ಯನವರು, ವೆಂಕಟ ಸುಬ್ಬಯ್ಯನವರು, ಕೆ. ಕೃಷ್ಣಮೂರ್ತಿಯವರು ಏ. ನಂಜಪ್ಪಶೆಟ್ಟಿಯವರು, ಯಂ. ಸಿದ್ದಲಿಂಗಪ್ಪನವರು, ಕ್ರಿಶ್ಚಿಯನರ ಒಂದು ಸೀಟಿಗೆ ಮೆ. ವಾರುಣಿಯವರು, ಮುಹಮ್ಮದೀಯರ ಎರಡು ಸೀಟಿಗೆ ಮೆ. ಗಳಾದ ಯಂ. ಯಂ. ಸಿದ್ದೀಕ್‌ರವರು, ಮುಹಮ್ಮದ್ ಗೌಸರವರು, ಅಬ್ದುಲ್ ರಹಮನ್ ಖಾನ್‌ರವರು ಉಮೇದ್ವಾರರಾಗಿ ನಿಂತಿರುವದಾಗಿ ತಿಳಿಯುತ್ತೇವೆ.

ಕೊಡಗಿನ ಹೈಸ್ಕೂಲುಗಳ ವಾಕ್ಪಟುತ್ವ ಸ್ಪರ್ಧೆಯು ಮಡಿಕೇರಿ ಹೈಸ್ಕೂಲಿನಲ್ಲಿ ಕಳೆದ ತಾ. 14—1—33 ನೇ ಶನಿವಾರ ನಡೆಯಿತು. ಈ ಸ್ಪರ್ಧೆಯಲ್ಲಿ ಇಂಗ್ಲಿಷ್‌ನಲ್ಲಿ, ಮೆ. ಡಿ. ಕೆ. ಮೇದಪ್ಪನವರಿಗೆ ಮೊದಲನೆಯ ಇನಾಮೂ ಮತ್ತು ಹೆಚ್. ಗೋಪಾಲಂವರಿಗೆ ಎರಡನೆಯ ಇನಾಮು ದೊರಕಿತು. ಇವರಿಬ್ಬರೂ ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳೇ, ಮತ್ತು ಕನ್ನಡದಲ್ಲಿ ಮೆ. ಕೂತಂಡ ಮೂಚಯ್ಯನವರಿಗೆ ಮೊದಲನೆಯ ಇನಾಮೂ ದೊರಕಿತು. ಇವರು ಸಹ ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿ. ಈ ಎಲ್ಲಾ ಇನಾಮುಗಳೂ ವೀರಾಜಪೇಟೆ ಹೈಸ್ಕೂಲಿಗೆ ಸಂದವು.

ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲು ಕೆಲವು ದಿವಸಗಳಿಂದೀಚೆಗೆ ರಾಜಕೀಯ ಕೈದಿಗಳಿಗೆ ವಾರನವರಿಗೆ ಕೊಡಬೇಕಾದ ಉಪಚಾರವನ್ನು ಕೊಡದೆ ತೊಂದರೆ ಪಡಿಸುತ್ತಾರೆಂದು, ಜೈಲಿನಿಂದ ಬಿಡುಗಡೆಯೊಗಿ ಬಂದವರಿಂದ ತಿಳಿದುಬಂದಿರುವದರಿಂದ, ಈ ಸಂಬಂಧ ಅಸಮೂಧಾನವನ್ನು ತೋರಿಸುವ ಬಗ್ಗೆ ಗೋಣಿಕೊಪ್ಪಲಿನಲ್ಲು ಒಂದು ಸಾರ್ವಜನಿಕ ವಿಷಯಿಗುಮೂಡಿ ಈ ಕೆಳಗಿನ ಠರಾವುಗಳನ್ನು ಮಂಜೂರುಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಂತಿಕೊಟ್ಟಿರುತ್ತಾರೆಂದು ತಿಳಿಯುತ್ತೇವೆ.

(1) ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿ ರಾಜಕೀಯ ಕೈದಿಗಳಿಗೆ ಮಾನವರಿಗೆ ಕೊಡಬೇಕಾದ ಉಪಚಾರವನ್ನು ಕೊಡದೆ ಇರುವುದಕ್ಕೆ ಈ ಸಭೆಯು ವಿಷಾದಿಸುತ್ತದೆ.

(2) ಈ ವಿಷಯ ವಿಚಾರಿಸಿ, ಶಕ್ಯ ಏರ್ಪಾಡುಮಾಡುವ ಬಗ್ಗೆ ಚೀಫ್ ಕಮಿಶನರವರು, ಮದ್ರಾಸು ಗವರ್ನರು, ಲಾ ಮೆಂಬರು, ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ತಂತೀ ಕಳುಹಿಸತಕ್ಕದೆಂದು ಈ ಸಭೆಯು ತೀರ್ಮಾನಿಸುತ್ತದೆ.

ಠಿದ್ದುಪಡಿ.

ಕಳೆದ ಕೊಡಗು ಸಂಚಿಕೆಯ ಅಂದರೆ ತಾ 13—1—33 ರ ಪತ್ರಿಕೆಯಲ್ಲಿ "ಅಮ್ಮತ್ತಿಯ ಪತ್ರ" ಎಂಬ ಬಾತ್ಮಿಯ ಮೊದಲನೆಯ ಪಂಗ್ತಿಯಲ್ಲಿ "6 ತಿಂಗಳುಗಳಿಂದ" ಎಂದಿರುವುದು ಇದು ಮೊಳೆ ಜೋಡಿಸುವಾಗ ಕೈತಪ್ಪಿನಿಂದ ಆದದ್ದಾಗಿದೆ. ಇದನ್ನು "ಸುಮಾರು 6 ವಾರಗಳಿಂದ" ಎಂದು ಓದಿಕೊಳ್ಳತಕ್ಕದ್ದು.

'ಕೊ. ಸಂ.'

ಹಿಂದೂ ದೇ ಶ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಬೊಂಬಾಯಿಯಿಂದ ಅಹ್ಮದಾಬಾದಿಗೆ ತೆರಳಿ ಸಬರ್‌ಮತಿ ಆಶ್ರಮದಲ್ಲಿ ಕೆಲಕಾಲ ಉಳಕೊಳ್ಳುವರಂತೆ.

ಅಹ್ಮದಾಬಾದಿನ ಫಿನಿಕ್ಸ್ ಚಾಪಖಾನೆಯು ಪೊಲೀಸರಿಂದ ಜಪ್ತಿಮಾಡಲ್ಪಟ್ಟ ಭಗತ್‌ಸಿಂಗನ ಚಿತ್ರದ ಕೆಲವು ಪ್ರತಿಗಳೂ ಪಡಿಯಚ್ಚುಗಳೂ ಒಯ್ಯಲ್ಪಟ್ಟಿವೆ.

ಮಿಡ್ನಾಪುರ ಜಿಲ್ಲೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಡೊಗ್ಲಾಸ್ ಸಾಹೇಬರ ಕೊಲೆ ಮಾಡಿದ ಪ್ರದ್ಯುತ್ ಕುಮಾರ ಭಟ್ಟಾಚಾರ್ಜಿಯವನನ್ನು ಗಲ್ಲಿಗೇರಿಸಿ, ಆತನ ಬಂಧುಗಳ ಮುಂದೆ ಜೈಲು ವಶಾರದಲ್ಲಿ ಶವ ಸಂಸ್ಕಾರ ನಡಿಸಿದರು.

ಹೈದರಾಬಾದ್ ಸಿ. ಐ. ಡಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಅಬ್ದುಲ್‌ರಹಮಾನ್ ಖಾನ್‌ರವರ ಪತ್ನಿ ಮಹನೀಸ್ ಬೀಗಂ ಎಂಬಾಕೆಯು ಕಳೆದ ತಾ. 8ನೇ ಭಾನುವಾರ ವಿಶಾಖಪಟ್ಟಣದಲ್ಲಿ ಆರ್ಯಸಮಾಜದ ಕಾರ್ಯದರ್ಶಿಯವರಿಂದ ಶುದ್ಧಿಯನ್ನು ಹೊಂದಿ ಹಿಂದು ಮತವನ್ನು ಸ್ವೀಕರಿಸಿ ಪದ್ಮಿನಿ ಎಂದು ನಾಮಕರಣ ಹೊಂದಿದಳು.

ರಾಜ ಮಹೇಂದ್ರಿ ಜೈಲಿನಲ್ಲಿ ಜಯದೇವ ಕಾಪೂರನೆಂಬ ರಾಜಕೀಯ ಕೈದಿಯು ಉಪವಾಸ ಮಾಡಲು ತೊಡಗಿ 70 ದಿನಗಳಾದವು. ಬಲತ್ಕಾರದಿಂದ ಆಹಾರ ಕೊಡುವುದಕ್ಕೂ ಅಸಾಧ್ಯನೆನಿಸಿ ಸಂತೆ ಮೂಗಿನ ಸೊಳ್ಳೆಗಳು ಉಬ್ಬಿ ವ್ರಣವಾದಂತೆ ಇದೆಯೆಂದೂ ಮೂರ್ಚಿತನಾಗಿ ಬಿದ್ದು ಬಹಳ ಅಪಾಯ ಸ್ಥಿತಿಯಲ್ಲಿರುವನೆಂದು ತಿಳಿದು ಬಂದಿದೆ.

ಡಾಕಾ ಕಾಲೇಜಿನ ಬಳಿಯಲ್ಲಿ ಅಪರಾಹ್ನ 1 ಗಂಟೆಗೆ ಒಬ್ಬ ಸೋಲ್ಜರನಿಗೆ ಇಬ್ಬರು ಹಿಂದು ಯುವಕರು ಉಕ್ಕಿನ ಸಬಳಗಳಿಂದ ಹೊಡೆದರು. ಹೊಡೆದವರಲ್ಲಿ ಒಬ್ಬನು ಸೈಕಲಿನಲ್ಲಿ ಪರಾರಿಯೂದನು, ಮತ್ತೊಬ್ಬನು ವಿದ್ಯಾಲಯದ ಗೋಡೆ ಹಾರಿ ಒಳಗಿನ ವಿದ್ಯಾರ್ಥಿಗಳ ಗುಂಪಿನೊಳಗೆ ನುಗ್ಗಿ ಮೊಯಾದನು. ಪೊಲೀಸರ ತನ್ಕಿ ನಡೆಯುತ್ತಿದೆ.

ಅಸ್ಪೃಶ್ಯತಾ ನಿವಾರಣಾ ಸಂಬಂಧವಾದ ಪ್ರಚಾರ ಕಾರ್ಯಕ್ಕಾಗಿ ಸಂಚರಿಸುತ್ತಿದ್ದ ನರಸಿಂಹ ಶರ್ಮ, ಕೆ. ಗೋಪಾಲ್‌ರಾವ್, ಜಗನ್ನಾಥ ಶಾಸ್ತ್ರಿ ಮುಂತಾದ ಎಂಟು ಮಂದಿಗಳನ್ನು ಪೊಲೀಸರು ಹಿಡಿದು ಸರ್ ಸಾಪುರ ಸಬ್ ಜೈಲಿನಲ್ಲಿ ರಿಸಿರುವರಂತೆ. ಇವೆಲ್ಲ ಆಂಧ್ರ ಪ್ರಾಂತಿಕ ಹರಿಜನ ಸೇವಾ ಸಂಘದವರು. ಈ ಪ್ರಚಾರಕ್ಕಾಗಿ ಮಹಾತ್ಮ ಗಾಂಧಿಯವರಿಗೆ ತಂತಿ ಬಿಟ್ಟಿರುವರು.

ಪಾಟ್ನಾ ನಗರದ ಹತ್ತರ ದಿನಾಪೂರ್ ಪೊಲೀಸ್ ಸ್ಟೇಷನ್ ಸಮೀಪದಲ್ಲಿರುವ ಪಿಕಾಪುರವೆಂಬ ಗ್ರಾಮದಲ್ಲಿ ಪೊಲೀಸಿನವರು ಪಾಟ್ನಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಡಿಕ್ಟೇಟರಾದ ಮೆ ರಾಮವಲ್ಲಭ ಚತುರ್ವೇದಿ ಎಂಬವರನ್ನೂ, ಹದಿನಾಲ್ಕು ಮಂದಿ ವಾಲಂಟಿಯರುಗಳನ್ನೂ ದಸ್ತಗಿರಿ ಮಾಡಿದರು. ಪೊಲೀಸಿನವರು ಕೋಧನೆ ಮಾಡಿದ್ದರಲ್ಲಿ ಕಾಂಗ್ರೆಸ್ಸಿನ ಹಲವು ಹಸ್ತಪತ್ರಿಕೆಗಳೂ, ಲೇಖನಗಳೂ ಸಿಕ್ಕಿದವೆಂದು ತಿಳಿದುಬಂದಿದೆ.

ಕಣ್ಣನೂರು ಜೈಲಿನಲ್ಲಿರುವ ಪಯ್ಯೋಳಿ ಕೇಶವ ನಾಯರ್ ಎಂಬೊಬ್ಬ ರಾಜಕೀಯ ಕೈದಿಯು ಅನ್ನ ತ್ಯಾಗ ಮಾಡಿರುವನು. ಬಹಳ ದಿನಗಳಾದವು. ಬಹಳ ಅಪಾಯವಾದ ಸ್ಥಿತಿ. ಬಲತ್ಕಾರದಿಂದ ಆಹಾರ ಕೊಡಲಾಗುತ್ತಿದೆ. ಆದರೂ ಇನ್ನು ನಾಲ್ಕು ದಿನಗಳ ತನಕ ಮಾತ್ರ ಬದುಕಬಹುದೆಂಬ ಅಶೆ. ರಕ್ಷವನ್ನು ಕಾರುತ್ತಿದ್ದಾನೆ. ಇತರ ಎಲ್ಲಾ ಖೈದಿಗಳೂ ಭಾರದಲ್ಲಿ ಒಹುಮಟ್ಟಿಗೆ ಇಳಿದಿದ್ದಾರೆಂದು ತಿಳಿಸುನ್ನನ ಭಸ ಈಗ ತಾನೇ ಬಿಡುಗಡೆ ಹೊಂದಿ ಬಂದವರ ವತ ಮಾನವಾಗಿದೆ.

ರೂತ್ಲಾಂ ನಗರದಿಂದ ಹನ್ನೆರಡು ಮೈಲಿ ಆಚೆ ಇರುವ ಕಾಡು ಪ್ರದೇಶದಲ್ಲಿ ೧೩ ಮಂದಿ ಡಕಾಯಿತರಿದ್ದರು. ಅವರನ್ನು ಹಿಡಿಯಲು ಪೊಲೀಸಿನವರು ಅಲ್ಲಿಗೆ ಹೋದಾಗ ಅವರು ಗುಂಡು ಹಾರಿಸಿ ನಾಲ್ಕು ಮಂದಿ ಪೊಲೀಸಿನವರನ್ನು ಕೊಂದು ಹಾಕಿ ಹಲವರನ್ನು ಗಾಯಪಡಿಸಿದರು. ಉಭಯ ಪಕ್ಷದವರಿಗೂ ಸುಮಾರು ಎರಡು ಗಂಟೆ ತನಕ ಹೋರಾಟ ನಡೆಯಿತು. ಪೊಲೀಸಿನವರು ಡಕಾಯಿತರ ಪೈಕಿ ಇಬ್ಬರನ್ನು ಕೊಂದು ಹಾಕಿ ಹಲವರನ್ನು ಗಾಯಪಡಿಸಿ ಎಲ್ಲರನ್ನೂ ಹಿಡಿದರು.

ನಾಸಿಕ ಜೈಲಿನಲ್ಲಿ ರಾಜಕೀಯ ಕೈದಿಯೊಗಿರುವ ಅಮೃತಲಾಲ್ ಶಕ್ಕರವಡು ಕಳೆದ ಅಕ್ಟೋಬರ್ ತಿಂಗಳಲ್ಲಿ ಜೈಲಿನ ಅಧಿಕಾರಿಗಳಿಂದ ಹಿಂಸಿಸಲ್ಪಟ್ಟುದಕ್ಕಾಗಿ 2 ದಿವಸಗಳ ವರೆಗೆ ಸ್ಮೃತಿತಪ್ಪಿ ಬಿದ್ದಿದ್ದರು. ಇದಕ್ಕಾಗಿ, ಹಿಂಸಿಸಿದ ಅಧಿಕಾರಿಗಳ ವಿಚಾರಣೆಯನ್ನು ನಡೆಸಲು ನಿಯಮಿಸಲ್ಪಟ್ಟಿದ್ದ ಮೇಜಿಸ್ಟ್ರೇಟರು ಅಪರಾಧಿಗಳು ಕೃತ್ಯನಡೆಸಿದುದು ಸತ್ಯವೆಂದು ನಿದರ್ಶನ ಬಂದದರ ನಂತರ ಜೈಲರಿಗೆ 1 ವರ್ಷ ಇನ್ನೊಬ್ಬನಿಗೆ 9 ತಿಂಗಳು ಕಠಿಣ ಸಜವನ್ನು ವಿಧಿಸಿ ಒಬ್ಬ ಹವಲ್ದಾರ್ ಇನ್ನೊಬ್ಬ ಸಿಪಾಯಿಯನ್ನು ದೋಷ ಮುಕ್ತರನ್ನಾಗಿ ನೂಡಿರುವರು.

ವಿ ದೇ ಶ.

ಕಳೆದ ವರ್ಷ ರಷ್ಯದವರು ನೂರಾಟಕಿಟ್ಟ ಎಣ್ಣೆ ಇಪ್ಪತ್ತು ಕಾಲು ಮಿಲಿಯ ಟನ್.

ಚೀನಾ—ಜಪಾನ್ ಕಾಳಗವು ಕರಾಳವಾಗುತ್ತಿದೆ. ಮುಳೆಯಂತೆ ಬೋಬುಗಳು ಸುರಿಯಲ್ಪಡುತ್ತಲಿವೆ.

ಲಂಡನಿನಲ್ಲಿ ಇನ್‌ಫ್ಲುಯೆಂಜಾ ಜ್ವರವು ಹಾವಳಿಗಿಟ್ಟಿದೆ. ನಗರದೊಳಗಿನ ಟೆಲಿಫೋನ್ ಓಪರೇಟರರಲ್ಲೇ ನಾನೂರು ಜನರು ಗೈರ್ಹಾಜರಿ.

ಈ ತಿಂಗಳ ಆಖೈರಿನೊಳಗೆ ತೆರಿಗೆ ಬಾಕಿ ಇಟ್ಟವರು ತೆರದಿದ್ದರೆ ಶೇಕಡಾ 10 ರಷ್ಟು ದಂಡನೆ ತೆರಿಗೆ ಕೂಡಿಸಿ ತೆರಬೇಕಾದೀತೆಂದು ಫ್ರೆಂಚ್ ಸರಕಾರದ ಪ್ರಕಟಣೆ.

ಸೈಬೀರಿಯಾ ದೇಶದ ಪೂರ್ವಭಾಗದಲ್ಲಿರುವ ಸಮುದ್ರದಲ್ಲ ರಷ್ಯಾ ದೇಶದ ಒಂದು ಹಡಗು ಮುಳುಗಿಹೋಯಿತು. ಹಡಗಿನಲ್ಲಿದ್ದ 254 ಜನರು ನೀರಿನಪಾಲಾದರು.

ವೆಲೆನ್ಸಿಯದ ಬೆಂಕಾಯಗಾರರು ಸರಕಾರಕ್ಕೆದುರಾಗಿ ಬಂಡಾಯವೆಬ್ಬಿಸಿ, ಸಿಡಿಮದ್ದಿನ ಉಗ್ರಾಣಗಳನ್ನು ಸುಟ್ಟು ಹಾಳುಮಾಡಲಾರಂಭಿಸಿದ್ದಾರೆ. "ನೋವಿಯಟ್ ಪ್ರಜಾಸತ್ತೆ" ಯೆಂದು ಕೂಗು ಎದ್ದಿದೆ. ಸರಕಾರಿ ಸೈನಿಕರು ದಂಗೆಯನ್ನು ನಿಲ್ಲಿಸಲು ಶ್ರಮಪಡುತ್ತಿರುವರು.

ಹಂಗೆರಿ ದೇಶದ ಸರ್ಕಸ್ ಕಂಪೆನಿಯ ಮೇನೇಜರು ತೆರಿಗೆಯನ್ನು ಕೊಡಲಾರದೆ ಆ ಮೊಬಲಗಿಗೆ ಪ್ರತಿಫಲವಾಗಿ ಕಂಪೆನಿಯ ಏಳು ಸಿಂಹಗಳನ್ನೂ, ಹದಿಮೂರು ಕೋತಿಗಳನ್ನೂ ಬುಡಾಪೆಸ್ಟ್ ನಗರದ ಪ್ರಾಣಿಶಾಲೆಗೆ ಕೊಟ್ಟುಬಿಟ್ಟನು. ಅಧಿಕಾರಿಗಳು ಅದನ್ನು ಸ್ವೀಕರಿಸಿದ್ದಾರೆ.

ಆಸ್ಟ್ರೇಲಿಯೂ ದೇಶಕ್ಕೆ ಸೇರಿದ ಬೆಂಡಿಗೋ ನಗರದಲ್ಲಿ ಭೂಮಿಯ ಕೆಳಗಡೆ ಇಪ್ಪತ್ತೇ ಅಡಿ ಆಳದಲ್ಲಿ ಹೊಸ ಚಿನ್ನದ ಗಣಿಯೊಂದು ಸಿಕ್ಕಿದೆ. ಗಣಿಯ ಮೇಲೆ ಒಂದು ಕಡೆ ಕ್ರಿಕೆಟ್ ಆಟದ ವೈಶಾಲವು ಇದೆ. ಈ ಗಣಿಯ ಹತ್ತರದಲ್ಲೇ ಅನೇಕ ಹಳೇ ಗಣಿಗಳೂ ಇರುವವು. ಅವು 4000 ಅಡಿ ಆಳವಾಗಿವೆ.

ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನಗಳ ಸರಕಾರದಧೀನದಲ್ಲಿರುವ ಫಿಲಿಪ್ಪೈನ್ ದ್ವೀಪಗಳಿಗೆ ಎಂಟು ವರುಷಗಳತರುವಾಯ ಸ್ವತಂತ್ರಾಧಿಕಾರವನ್ನು ಕೊಡುವಂತೆ ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಮಸೂದೆಯು ಬಹುಮತದಿಂದ ಪಾಸಾಗಿತ್ತು, ಆದರೆ ಅಂಥಾ ಬದಲಾವಣೆಯು ಈಗಿನ ಸ್ಥಿತಿಗತಿಗಳಿಗೆ ಅನುಗುಣವಾದದ್ದಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿ ಸಂಯುಕ್ತ ಸಂಸ್ಥಾನಗಳ ಸರ್ಕಾರದ ಪ್ರೆಸಿಡೆಂಟರು ಆ ಮಸೂದೆಯನ್ನು ಸ್ಯಾಂಕ್ಷನ್ ಮಾಡಲಿಲ್ಲ.

ವನಮೂಲಿಕೆಗಳಿಂದ ಭುಗಾರ ಮಾಡುವ ವಿಧಾನ ಮತ್ತು ಬ ಓಲೆಗರಿ ಪುಸ್ತಕದಲ್ಲಿ 13 ಪ್ರಯೋಗಗಳು ಹೇಳಲ್ಪಟ್ಟಿವೆ ಪೂರ್ವಕಾಲದಲ್ಲಿ ಸಿಲೋನಿಗೆ ಪಾಶ್ಚಾತ್ಯ ದೇಶಗಳಿಂದ ಭುಗಾರ ಬರುತ್ತಿರಲಿಲ್ಲ ಮತ್ತು ಆ ದೇಶದಲ್ಲಿ ಭುಗಾರದ ಗಣಿಗಳಿಲ್ಲ. ಆದರೂ ದೇಶದಲ್ಲಿ ಮಾತ್ರ ಯಥೇಚ್ಛವಾಗಿದ್ದಿತು ಇದರಿಂದ ಜನರು ವನಮೂಲಿಕೆಗಳನ್ನು ಉಪಯೋಗಿಸಿ ಭುಗಾರವನ್ನು ಮೂಡುತ್ತಿದ್ದರೆಂದು ನಂಬಲು ಅವಕಾಶವುಂಟಾದು. ಈ ಓಲೆಗರಿ ಗ್ರಂಥದಲ್ಲಿ ಹೇಳಿರುವ ಮೂಲಿಕೆಗಳಲ್ಲಿ ಒಂದು ವಿನಾ ಮಿಕ್ಕವೆಲ್ಲ ಗುರ್ತಿಸಲ್ಪಟ್ಟಿವೆ. ಎಂದು ಹೇಳಿ ಓಲೆಗರಿ ಗ್ರಂಥವನ್ನ ಪರಿಶೋಧಿಸಿರುವ ಡಿಸಿಲ್ವ ಎಂಬವರು ಹೇಳಿರುವರು. ಈ ಗ್ರಂಥವು ಒಂದು ನೆಲಮಾಳಿಗೆಯಲ್ಲಿ ದೊರಕಿತೆಂದೂ, ಸಿಲೋನಿನಲ್ಲಿ 1000 ನೆಲಮಾಳಿಗೆಗಳಿವೆಯೆಂದೂ, ಇವುಗಳೊಂದರಲ್ಲಿ 18 ಅಡಿ ಉದ್ದವಿರುವ ಭುಗಾರದ ಬುದ್ಧನ ವಿಗ್ರಹವಿರುವುದಾಗಿ ಈ ಗ್ರಂಥದಲ್ಲಿ ಹೇಳಲ್ಪಟ್ಟಿದೆಯೆಂದು ತಿಳಿಸಿರುತ್ತಾರೆ.

ನಿರುದ್ಯೋಗ ಮತ್ತು ಅದರ ಕಾರಣಗಳು

ಸರ್. ವಿಶ್ವೇಶ್ವರಯ್ಯರ ಬೋಧಪರ ಭಾಷಣದ ಸಾರಾಂಶ.

ಕಳೆದ ಘೋರಯುದ್ಧದ ಕಾಲದಲ್ಲಿ ಸಾಲ ತೆಗೆದುಕೊಂಡ ಜನಾಂಗದವರು ಈಗ ಆ ಸಾಲದ ಕಂತುಗಳನ್ನು ಸಂದಾಯ ಮಾಡಲು ಹಿಂದೆಗೆಯುತ್ತಿರುವದ ; ಮತ್ತು ಎಲ್ಲೆಲ್ಲೂ ಆಮದು ರಫ್ತು ಪದಾರ್ಥಗಳ ಮೇಲೆ ಹೆಚ್ಚಾಗಿ ಸುಂಕಗಳನ್ನು ವಿಧಿಸುವುದು; ಈ ಕಾರಣಗಳಿಂದ ಎಲ್ಲೆಲ್ಲೂ ಕೈಗಾರಿಕೆ ವ್ಯಾಪಾರಗಳಿಗೆ ಅಡಚಣೆಯುಂಟಾಗಿ ಜನರಲ್ಲಿ ನಿರುದ್ಯೋಗವು ಹೆಚ್ಚುತ್ತಿರುವುದು. ಎರಡನೆಯದಾದರೆ, ಇಂಡಿಯದಲ್ಲಿ ತಡೆಯಿಲ್ಲದೆ ಸಂತಾನಗಳು ಜನಿಸಿ ಪ್ರಜಾ ಸಂಖ್ಯೆಯು ಅಪರಿಮಿತವಾಗಿ ಹೆಚ್ಚುತ್ತಿರುವುದ. ಮತ್ತು ಮೂರನೆಯದಾದರೆ ಬಹುಕಾಲದಿಂದ ನಾವು ಸಹಿಸುತ್ತಿರುವ ರಾಜಕೀಯ ದುಸ್ಥಿತಿ ಇವುಗಳ ಜೊತೆಗೆ ಈಗ ಸುಮಾರು ಏಳತ್ತು ವರ್ಷಗಳ ಹಿಂದೆ ಸಂಭವಿಸಿದಂತೆ ದ್ವಾದಶ ವರ್ಷ ಕ್ಷಾಮವೂ ಸಂಭವಿಸಿದ್ದರೆ ದೇಶದ ಸ್ಥಿತಿಯು ಘೋರವಾಗುತ್ತಿದ್ದಿತು. ನಮ್ಮ ರೈ

ರುಗಳು ವರ್ಷದಲ್ಲಿ ನಾಲ್ಕೈದು ತಿಂಗಳುಗಳು ಮಾತ್ರ ಸಾಗುವಳಿಯಲ್ಲಿ ಉದ್ಯುಕ್ತರಾಗಿ ಉಳಿದ ಎಳೆಂಟು ತಿಂಗಳುಗಳೆಲ್ಲಾ ಸುಮ್ಮನೆ ವಿಶ್ರಾಂತರಾಗಿ ಉದ್ಯೋಗವಿಲ್ಲದೆ ಕಾಲ ಕಳೆಯುತ್ತಾರೆ. ಈಗ ಸುಮಾರು ೨೫ ವರ್ಷಗಳ ಹಿಂದೆ ವಿದ್ಯಾನಿಲಯಗಳಲ್ಲಿ ಉತ್ತೀರ್ಣರಾದವರು ಸರ್ಕಾರದ ಇಲಾಖೆಗಳಲ್ಲಿ ಉದ್ಯೋಗವನ್ನು ಹೊಂದುತ್ತಿದ್ದರು. ಈಚೆಗೆ ಆ ಅವಕಾಶವು ಬರ ಬರುತ್ತ ಕಡಿಮೆಯಾಗುತ್ತಿದೆ. ಈಗ ವಿದೇಶಗಳಿಗೆ ಹೋಗಿ ಶಿಕ್ಷಣವನ್ನು ಹೊಂದಿ ಬಂದವರಿಗೂ ಕೆಲಸಗಳು ಸಿಕ್ಕುವುದು ಕಷ್ಟ. ಕೂಲಿಕಾರರು ಕೂಡ ಯುದ್ಧದಿಂದೀಚೆಗೆ ಒಳ್ಳೇ ಸಂಪಾದನೆಯನ್ನು ಮಾಡುತ್ತಿದ್ದು ಈಚೆಗೆ ಅವರ ಉತ್ಪತ್ತಿಯೂ ಕಡಿಮೆಯಾಗುತ್ತಿರುವುದು. ಜಿನೀವಾದ ಲೀಗ್ ಆಫ್ ನೇಶನ್ಸ್ ಸಮಿತಿಯವರ ಲೆಕ್ಕದ ಪ್ರಕಾರ ಯೂರೋಪು ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನಿರುದ್ಯೋಗದಿಂದಲೂ ಅಲ್ಪೋದ್ಯೋಗದಿಂದಲೂ ತಪಿಸುತ್ತಿರುವವರ ಸಂಖ್ಯೆಯು ಐದು ಕೋಟಿಗೆ ಕಡಿಮೆ ಇಲ್ಲದೆ ಇರುವದು. ಇಂಡಿಯಾದಲ್ಲಿ ನಿರುದ್ಯೋಗಕ್ಕೆ ಈಡಾಗಿರುವವರ ಸಂಖ್ಯೆಯು ಸುಮಾರು ಹತ್ತು ಕೋಟಿ ಕಡಿಮೆ ಇಲ್ಲವೆಂದು ಹೇಳಬಹುದು. ನಮ್ಮ ದೇಶದಲ್ಲಿ ಸರಾಸರಿ ನೂರಕ್ಕೆ ೭೩ ಜನರ ಜೀವನೋಪಾಯವು ಕೃಷಿ ಮತ್ತು ಅದರ ಉಪನೃತ್ತಿಗಳಿಂದ ನಡೆಯುತ್ತದೆ. ಇತರ ಜನಾಂಗಗಳಲ್ಲಿ ಕೃಷಿಯಿಂದ ಜೀವಿಸುವವರ ಸಂಖ್ಯೆಯು ಎಷ್ಟೋ ಕಡಿಮೆ. ಇತರ ದೇಶಗಳಲ್ಲಿ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುತ್ತಾ ಕೃಷಿಯಲ್ಲಿ ಉದ್ಯುಕ್ತರಾದವರ ಸಂಖ್ಯೆಯು ಎಷ್ಟೋ ಕಡಿಮೆ. ಇತರ ದೇಶಗಳಲ್ಲಿ ಕೈಗಾರಿಕೆಯು ಪ್ರಾಬಲ್ಯಕ್ಕೆ ಬರುತ್ತಾ ಕೃಷಿಯಲ್ಲಿ ಉದ್ಯುಕ್ತರಾದವರ ಸಂಖ್ಯೆಯು ಬರಬರುತ್ತ ಕಡಿಮೆಯಾಗುತ್ತಿರುವುದು. ಇಂಡಿಯಾದಲ್ಲಿ ಇದಕ್ಕೆ ವಿರುದ್ಧವಾಗಿರುವುದು. ಇಂಡಿಯಾದ ಪ್ರಜಾ ಸಂಖ್ಯೆಯ ಈ ೨೦ ವರ್ಷಗಳಲ್ಲಿ ೪ ಕೋಟಿಯಷ್ಟು ಹೆಚ್ಚಿರುವುದು ಇದರಿಂದ ಒಂದು ಕಡೆ ಕೃಷಿಯಿಂದ ಜೀವಿಸುವವರ ಸಂಖ್ಯೆಯು ಹೆಚ್ಚಿರುವುದು; ಕೃಷಿಯಿಂದ ಉತ್ಪತ್ತಿಯು ಮಾತ್ರ ಹೆಚ್ಚಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆಯ ಉತ್ಪತ್ತಿಯು ಕೃಷಿಯ ಉತ್ಪತ್ತಿಯಲ್ಲಿ ನಾಲ್ಕರಲ್ಲಿ ಒಂದು ಭಾಗಕ್ಕಿಂತ ಕಡಿಮೆಯಾಗಿರುವುದು. ಇಂಗ್ಲೆಂಡಿನಲ್ಲಿ ಕೃಷಿಗೆ ಹತ್ತರಷ್ಟು ಕೈಗಾರಿಕೆಯಿಂದ ಉತ್ಪತ್ತಿಯಾಗುತ್ತದೆ. ದೇಶದಲ್ಲಿ ಜನರ ಜೀವನೋಪಾಯದ ಸೌಖ್ಯವು ದೇಶದ ಒಟ್ಟು ಉತ್ಪತ್ತಿಯ ಮೇಲೆ ನಿರ್ಧಾರವಾಗಬೇಕು. ದೇಶದ ಉತ್ಪತ್ತಿಯು ಹೆಚ್ಚಿದರೆ ಜನರ ಸುಖ ಸಂಪತ್ತಿಗಳು ಹೆಚ್ಚುತ್ತವೆ. ಉತ್ಪತ್ತಿಯು ಹೆಚ್ಚದೆ ಜನಸಂಖ್ಯೆಯು ಮಾತ್ರ ಹೆಚ್ಚಿದರೆ ಅವರ ಉಪ ಪತ್ತಿಗಳು ಕಡಿಮೆಯಾಗುತ್ತದೆ. ಇಂಡಿಯಾದ ಸ್ಥಿತಿಯು ಪ್ರಕೃತದಲ್ಲಿ ಹೇಗಿದೆ? ಇಲ್ಲಿಯ ಜನಗಳ ಜೀವನದ ದರ್ಜೆಯು ಹೆಚ್ಚಾಗಬೇಕಾದರೆ ಇಲ್ಲಿನ ಉತ್ಪತ್ತಿಯು ಹೆಚ್ಚಾಗಬೇಕು ದೇಶದ ಒಟ್ಟು ಸಂಪತ್ತನ್ನು ತಲೆಗೆ ಇಷ್ಟೆಂದು ಭಾಗಿಸಿ ನೋಡಿದರೆ ಇಂಡಿಯದ ಜನರೇ, ಚೀನಾದವರ ಹೊರತು ಇತರ ಎಲ್ಲಾ ದೇಶದ ಜನರಿಗಿಂತಲೂ ಕೀಳಾಗಿರುವರು.

ಸುಮಾರು ೯೦ ವರ್ಷಗಳ ಹಿಂದೆ ಇಂಗ್ಲೆಂಡಿನವರು ಉಗಿಯಂತ್ರಗಳ ನಿರ್ಮಾಣದಿಂದ ಕೈಗಾರಿಕೆಗಳನ್ನು ಉತ್ತೇಜನಪಡಿಸಿ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಂಡರು. ಇನ್ನು ನೋಡಿ ಜರ್ಮನ್, ಫ್ರೆಂಚ್, ಬೆಲ್ಜಿಯನ್ ಮುಂತಾದ ಜನರು ತಮ್ಮ ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಮುಂದಕ್ಕೆ ತಂದರು. ನಂತರ ಅಮೇರಿಕದವರೂ ಕೆನಡ ಜಪಾನಿನವರೂ ಇದೇ ಮೇಲ್ಪಂಕ್ತಿಯನ್ನೇ ಅನುಸರಿಸಿ ಪ್ರಾಬಲ್ಯಕ್ಕೆ ಬಂದರು. ಇಂಡಿಯಾದಲ್ಲಿ ಮಾತ್ರ ಕೈಗಾರಿಕೆಗೆ ಅವಕಾಶ ವಿಲ್ಲದೆ ಜನರು ಹಿಂದುಳಿದಿರುವರು. ಕಳೆದ ಶತಮಾನದಲ್ಲಿ ಇಂಡಿಯಾದವರು ಇಂಗ್ಲೆಂಡ್ ಮತ್ತು ಯುರೋಪುಗಳಿಗೆ ಬಟ್ಟೆ ಉಕ್ಕು ಮತ್ತು ಸಕ್ಕರೆಗಳನ್ನು ರಫ್ತು ಮಾಡುತ್ತಿದ್ದರು. ಈಗ ಅದು ಹೋಗಿ ನಾವೇ ಅಲ್ಲಿಂದ ೫೦ರಿಂದ ೭೦ ಕೋಟಿ ರೂಪಾಯಿ ಬೆಲೆ ಭಾಳುವಷ್ಟು ಅದೇ ಸಾಮಾನುಗಳನ್ನೇ ತರಿಸಿಕೊಳ್ಳುತ್ತೇವೆ ಹಿಂದೆ ಬೊಂಬಾಯಿಯ ಕಾರ್ಖಾನೆಗಳಿಂದ ಹತ್ತಿಯ ಬಟ್ಟೆಗಳು ಜಪಾನಿಗೆ ರಫ್ತಾಗಿ ಕಿಯೋಟೋ ಮತ್ತು ಯೊಕೊಹಾಮ ಪಟ್ಟಣಗಳಲ್ಲಿ ಹಿಂದೂ ವರ್ತಕರು ನೆಲೆಸಿದ್ದರು. ಈಗ ಅದು ಬದಲಾಯಿಸಿದೆ. ಕೃಷಿಯು ದೇಶಕ್ಕೆ ಅವಶ್ಯಕವಾದರೂ ಅದರಿಂದ ಈಗಿನ ಕಾಲದಲ್ಲಿ ದೇಶದ ಸಂಪತ್ತು ಹೆಚ್ಚುವದೆನ್ನುದು ಸುಳ್ಳು. ಇಂಡಿಯಾದಲ್ಲಿ ಕಳೆದ ೨೦ ವರ್ಷಗಳಿಂದ ರೈತರ ಸಂಖ್ಯೆಯು ಹೆಚ್ಚುತ್ತಾ ಬಂದರೂ ವ್ಯವಸಾಯದಿಂದಾಗಬೇಕಾದ ಉತ್ಪತ್ತಿಯು ಕಾಲಕ್ರಮದಿಂದ ಕಡಿಮೆಯಾಗುತ್ತಿರುವುದು. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಜಾ ಸಂಖ್ಯೆಯು ಹೆಚ್ಚಿದ್ದರೂ ಕೃಷಿಯಲ್ಲಿರುವ ಪ್ರಜೆಗಳು ಹೆಚ್ಚಿಲ್ಲ. ಮತ್ತು ಯಂತ್ರ ಮುಂತಾದ ಸಾಧನಗಳಿಂದ ಕೃಷಿಯ ಉತ್ಪತ್ತಿಯು ಒಂದೂವರೆಯಷ್ಟು ಹೆಚ್ಚಿಸಲ್ಪಟ್ಟಿದೆ. ೧೯೦೦ರಲ್ಲಿ ಅಲ್ಲಿನ ಕೃಷಿಯ ಉತ್ಪತ್ತಿಯೂ ಕೈಗಾರಿಕೆಯ ಉತ್ಪತ್ತಿಯೂ ಸಮಾನವಾಗಿದ್ದುವು. ಈಗ ಕೈಗಾರಿಕೆಯ ಉತ್ಪತ್ತಿಯು ಕೃಷಿಯದಕ್ಕಿಂತ ನಾಲ್ಕರಷ್ಟು ಹೆಚ್ಚಿರುವುದು. ಜಪಾನ್ ದೇಶದಲ್ಲಿ ಕೂಡ ೧೯೧೫ರಲ್ಲಿ ಕೈಗಾರಿಕೆಯ ಉತ್ಪತ್ತಿಯು ೧೫೦ ಕೋಟಿ ರೂಪಾಯಿಗಳ ಬೆಲೆಯುಳ್ಳದ್ದಾಗಿತ್ತು. ಈಗ ಅದು ಸಾವಿರ ಕೋಟಿಯಷ್ಟಾಗಿದೆ.

ಈಗ ಹಿಂದೂದೇಶದ ಹೊರತು ಯಾವ ಇತರ ದೇಶದಲ್ಲಿ ಸರ್ಕಾರದವರು ಜನರ ನಿರುದ್ಯೋಗದ ವಿಷಯದಲ್ಲಿ ತಟಸ್ಥರಾಗಿರುವುದಿಲ್ಲ. ಇಂಗ್ಲೆಂಡಿನಲ್ಲಿ ಅದಕ್ಕೆ ಬೇಕಾದಷ್ಟು ಗಮನವು ಕೊಡಲ್ಪಡುತ್ತಿರುವುದು. ಅಮೇರಿಕದಲ್ಲಿ ಕಳೆದ ಆಗಸ್ಟ್ ವರೆಗಿನ ೫ ತಿಂಗಳುಗಳಲ್ಲಿ ನರ್ತಕ ಸಂಸ್ಥೆಗಳಿಗೆ ಸಾಲ ಕೊಡುವುದಕ್ಕಾಗಿ ೪೦೦ ಕೋಟಿ ರೂಪಾಯಿಗಳಷ್ಟು ಒದಗಿಸಲ್ಪಟ್ಟಿತು. ಜರ್ಮನಿಯ ವಾನ್ ಪೇಪನ್ ಮುಖ್ಯ ಮಂತ್ರಿಯು ಕೈಗಾರಿಕೆಗಳ ಉತ್ತೇಜನಕ್ಕಾಗಿ ಈ ವರ್ಷ ೧೫೦ ಕೋಟಿ ರೂಪಾಯಿಗಳನ್ನು ಒದಗಿಸಿರುವನು. ಆಸ್ಟ್ರೇಲಿಯಾದಲ್ಲಿ ನಿರುದ್ಯೋಗದ ನಿವಾರಣೆಗಾಗಿ ೩ ವರ್ಷದೊಳಗೆ ೨೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ನಿರ್ಧರಿಸಿದರೆ, ಐರ್ಲೆಂಡಿನ ಈಗಿನ ಪ್ರೆಸಿಡೆಂಟ್ ಡಿವೇಲೆರಾ ಕೂಡ ಸಂಘದಭಿವೃದ್ಧಿಗಾಗಿ ಮೂರು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾನೆ. ಎಲ್ಲರೂ ಅಲ್ಪಗಳಿಯುವ ರಷ್ಯಾದಲ್ಲಿಯೂ ಕೂಡ ಮೂರು ವರ್ಷದ ಕೆಳಗೆ ೧೩ ಲಕ್ಷ ಜನರು ಉದ್ಯೋಗವಿಲ್ಲದಿದ್ದರೂ ಹೋದ ವರ್ಷದೊಳಗೆ ಅವರೆಲ್ಲರೂ ಉದ್ಯೋಗಿಗಳಾಗಿರುವರು. ಹೀಗಿರುವಲ್ಲಿ ಈ ವಿಷಯದಲ್ಲಿ ಪ್ರವರ್ತಿಸುವದು ಇಂಡಿಯಾ ಸರ್ಕಾರಕ್ಕೆ ಕೂಡ ಮುಖ್ಯ ಕರ್ತವ್ಯವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಈ ದೇಶದಲ್ಲಿ ಯಾವ ಭೂಮಿಜ ಖನಿಜಗಳು ಎಷ್ಟೆಷ್ಟು ಸಿಕ್ಕುತ್ತವೆಂಬ ಲೆಕ್ಕಗಳನ್ನು ತಯಾರಿಸಿ ಪ್ರತಿಯೊಂದು ಕೈಗಾರಿಕೆಯ ಪ್ರಕೃತ ಸ್ಥಿತಿಯನ್ನೂ, ಅವುಗಳನ್ನು ಮುಂದಕ್ಕೆ ತರುವುದಕ್ಕೂ ಮತ್ತು ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಅವಶ್ಯಕವಾದ ಸಾಧನಗಳನ್ನೂ ಅದು ಪರಿಶೀಲಿಸಿ ಜನಗಳಲ್ಲಿ ಪ್ರಚಾರ ಮಾಡಬೇಕು. ಪ್ರಾಂತೀಕ ಸರ್ಕಾರಗಳು ಪ್ರತಿಯೊಂದು ಪ್ರಾಂತ್ಯದ ಸಂಪತ್ತೂ ಎಷ್ಟು ಮಟ್ಟಿಗೆ ಬೆಳೆಯುತ್ತಿದೆ ಎಂಬುವುದರ ಲೆಕ್ಕಗಳನ್ನು ತಯಾರಿಸಬೇಕು. ಇದಲ್ಲದೆ ದೇಶದಲ್ಲಿ ಹೊರಡುವ ಕೈಗಾರಿಕೆಗಳಿಗೆ ಹೊರ ದೇಶದವರ ಮೇಲಾಟವು ಬರದಂತೆ ಹೊರಗಿನಿಂದ ಬರತಕ್ಕ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಬೇಕು. ಹೊರಗಿನಿಂದ ಯಂತ್ರ ನಿರ್ಮಿತವಾಗಿ ಬರುವ ವಸ್ತುಗಳೊಡನೆ ಸ್ಪರ್ಧಿಸಲು ಅಸಾಧ್ಯವಾದುದರಿಂದಲೇ ಇಲ್ಲಿನವರು ಎಲ್ಲವನ್ನೂ ಕೈಬಿಟ್ಟು ಕೂತಿರುವರು. ಈ ವಿಷಯದಲ್ಲಿ ಸರ್ಕಾರದ ಕರ್ತವ್ಯವು ಅತ್ಯವಶ್ಯಕ. ಮತ್ತು ಇಲ್ಲಿ ಪ್ರಚಾರದಲ್ಲಿರುವ ಬ್ಯಾಂಕುಗಳ ಆಡಳಿತದಲ್ಲಿಯೂ ನಾಣ್ಯಗಳ ಬೆಲೆಯ ವಿಚಾರದಲ್ಲಿಯೂ ಇಂಡಿಯಾ ಸರ್ಕಾರವು ದೇಶದ ಕ್ಷೇಮವನ್ನು ಚಿಂತಿಸುತ್ತಿಲ್ಲ. ಇದೆಲ್ಲಾ ಕೂಡಲೇ ಬದಲಾಯಿಸಬೇಕು. ನಮ್ಮ ದೇಶದ ಜನರಲ್ಲೂ ಕಾರ್ಯದಕ್ಷರೂ ಮೇಧಾವಿಗಳೂ ಇಲ್ಲದೆ ಇಲ್ಲ. ಆದರೆ ಒಟ್ಟು ಪ್ರಜೆಗಳಲ್ಲಿ ಅವರು ಬಹಳ ಸ್ವಲ್ಪ ಜನರಾದುದರಿಂದ ಒಟ್ಟಿನಲ್ಲಿ ದೇಶದ ಸ್ಥಿತಿಯು ಹೀನವಾಗಿರುತ್ತದೆ. ಆದುದರಿಂದ ನಮ್ಮ ಜನಾಂಗದಲ್ಲಿ ಇಂಥಾ ಕಾರ್ಯಾಧಕ್ಷರ ಸಂಖ್ಯೆಯು ಇನ್ನೂ ಬಹಳವಾಗಿ ಹೆಚ್ಚುವಂತೆ ಜನರಲ್ಲಿ ಶಿಕ್ಷಣವನ್ನು ಹಾಡಬೇಕು. ಇಲ್ಲಿ ಪ್ರಜಾ ಸಂಖ್ಯೆಯು ಅಪರಿಮಿತವಾಗಿ ಹೆಚ್ಚುತ್ತಿರುವುದನ್ನು ಕೂಡಲೇ ನಿರ್ಬಂಧಕ್ಕೆ ತರಬೇಕು. ಇದು ಎಂತು ವಿಧದಲ್ಲಿ ಸಾಧ್ಯ, ಒಂದು, ಮದುವೆಯ ವಯಸ್ಸನ್ನು ಹೆಚ್ಚಿಸುವದು. ಎರಡು, ಸಂತಾನ ಬಂಧನ. ಇದನ್ನು ಯೋಗಸಾಧನದಿಂದಾಗಲೀ ಅಥವಾ ಇತರ ದೇಶಗಳಲ್ಲಿ ಪ್ರಚಾರದಲ್ಲಿರುವ ಸಂತಾನ ನಿರೋಧ ಸಾಮಗ್ರಿಗಳಿಂದಾಗಲೀ ಸಾಧಿಸಬೇಕು. ಸಂಸಾರದಲ್ಲಿ ಮಕ್ಕಳು ಹೆಚ್ಚಿದ ಹಾಗೆಲ್ಲಾ ದಾರಿದ್ರ್ಯವು ಹೆಚ್ಚಿ, ಸುಖ ಸಂಪತ್ತಿಗಳು ಒಂದೊಂದಾಗಿ ಕಡಿಮೆಯಾಗುವುವು. ಇದನ್ನು ಇನ್ನು ಮೇಲಾದರೂ ಈ ದೇಶದಲ್ಲಿ ತಪ್ಪಿಸಬೇಕು. ಮನೆಯ ಯಜಮಾನನ ಮೂಲಕ ಸ್ಮತಿ ಸಂಸಾರದಲ್ಲಿಯೂ ಬಾಲ ಬಾಲಕಿಯರು ಸಮ್ಯಗ್ಜ್ಞಾನ, ಕಾರ್ಯಾಶಕ್ತಿ, ಶ್ರಮಶಕ್ತಿ, ಮನೋದಾರ್ಢ್ಯ, ಉತ್ಸಾಹ, ಐಶ್ವರ್ಯೇಚ್ಛೆಗಳಲ್ಲಿ ಒಪ್ಪಾಗಿರುವಿಕೆ ಇವುಗಳನ್ನು ಕಲಿತು ಅವಲಂಬಿಸಬೇಕು ಪ್ರತಿಯೊಬ್ಬ ಪ್ರಾಣಿಯು ದಿನಕ್ಕೆ ೮ ಗಂಟೆಗಳಿಗೆ ಕಡಿಮೆ ಇಲ್ಲದೆ ಯಾವುದಾದರೂ ಲಾಭಕರವಾದ ಉದ್ಯೋಗವನ್ನು ನಡೆಯಿಸಿಯೇ ತೀರಬೇಕು. ಹೆಂಗಸರು ಪ್ರಾಯಶಃ ಯಾವ ದ್ರವ್ಯಾರ್ಜನೆಯಲ್ಲಿಯೂ ವರ್ತಿಸಕೂಡದೆಂಬ ವಿಧಿಯು ಇನ್ನು ಮೇಲೆ ಹೋಗಬೇಕು. ಅವರುಗಳೂ ತಮ್ಮ ಕೈಲಾದ ವೃತ್ತಿಗಳನ್ನು ಅವಲಂಬಿಸಿದರೆ ಅದರಿಂದ ದೇಶದ ಒಟ್ಟು ಸುಸತ್ವ ವಿಶೇಷವಾಗಿ ಹೆಚ್ಚುವುದು. ಇತರ ದೇಶಗಳಲ್ಲೆಲ್ಲಾ ಹೆಂಗಸರು ಗಂಡಸಂತೆಯೇ ಅನೇಕ ಕೆಲಸಗಳನ್ನು ಮಾಡುತ್ತಿರುವರು.

'ನವಯುಗ'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಪರೆ.

ಕೊಡಗು ದೇಶದ ತೂಕದ ಬಟ್ಟುಗಳ ಮತ್ತು ಅಳತೆ ಸೇರು ಪರೆಗಳ ನಿಬಂಧನೆಯಲ್ಲಿ ಈಗ ತಾನೇ ಸರ್ಕಾರದವರು ಜಾರಿಗೆ ತಂದಿರುವ ಪರೆಯಲ್ಲಿ 'ತುಂಬಿದ ಧಾನ್ಯವನ್ನು ಉರುಟಾದ ದಪ್ಪ ದೊಣ್ಣೆಯಿಂದ ತಲೆ ಸವರುವ'ದಾಗಿನೆಯೆಂಬದಾಗಿ ಸೂಚಿಸಿದ್ದಾರೆ. ಇದು ನೋಡಿದರೆ ಹತ್ತಾರು ವರ್ಷಗಳ ಪ್ರಯತ್ನದಿಂದ ದೊರತ ಈ ಪರೆಯು ರೈತರಿಗೆ ಪರೆಯಿಂದಾಗುತ್ತಿದ್ದ ಕಷ್ಟ ನಷ್ಟಗಳನ್ನು ನಿವೃತ್ತಿ ಮಾಡಲೇ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ನಿಘಂಟಾದ ಒಂದೇ ಸೈಜಿನ ಅಳತೆ ಪರೆಯೊಂದು ಇಲ್ಲದ್ದರಿಂದ ಪ್ರತ್ಯವಲ್ಲ ಜನರಿಗೆ ಕಷ್ಟ ನಷ್ಟಗಳು. ಅಂಥಾ ಆ ಪರೆಯನ್ನು ತಲೆ ಸವರುವ ದೊಣ್ಣೆ ಮತ್ತು ಸವರುವ ಅಂದರೆ ಉರುಟು ದೊಣ್ಣೆಯನ್ನು ಪರೆಯ ಮೇಲೆ ಬೆರಳುಗಳ ತುದಿಯಲ್ಲಿ ಚಮತ್ಕಾರವಾಗಿ ಉರುಳಿಸುವದರಿಂದಲೂ 2—3 ರಾತಲು ತೂಕವಿರುವ ಆ ದೊಣ್ಣೆಯನ್ನು ಪರೆಯ ಮೇಲೆ ಎತ್ತಿಮಡಗುವದರಿಂದಲೂ ಬಹಳವಾದ ನಷ್ಟವಾಗುತ್ತಿತ್ತು. ಇದೇ ನಿಘಂಟಾದ ಪರೆ ಬೇಕೆಂದು ಕೇಳುವದಕ್ಕೆ ಒಂದು ಕಾರಣವೂ ಆಗಿತ್ತು. ಸಾಧಾರಣವಾಗಿ ಮರದ ಪರೆಯ ತಲೆಯ ಮೇಲೆ ತಟ್ಟುವುದರಿಂದ ಉಂಟಾಗುವ ನಷ್ಟಕ್ಕಿಂತಲೂ, ಹೆಚ್ಚಾಗಿ ತೆಳ್ಳಗಾದ ಲೋಹದ ತಗಡಿನಿಂದ ಮಾಡಿದ ಈ ಪರೆಯ ತಲೆಯನ್ನು ತಟ್ಟುವುದರಿಂದ ನಷ್ಟವಾಗುತ್ತದೆಂಬುದು ತಾಂಬ್ರದ ಉರುಟು ಪರೆಯನ್ನು ಮಾಡಿಸಿ ಇಟ್ಟುಕೊಂಡಿದ್ದ ಪ್ರತಿಯೊಬ್ಬರಿಗೂ ಅನುಭವವಿರುವ ಸಂಗತಿ. ಆದ್ದರಿಂದಲೇ ಅಂಥಾ ತಾಂಬ್ರದ ಪರೆಗಳು ಈಗ ಕಲಗಚ್ಚು ಹುಯ್ಯುವ ಪಾತ್ರೆಗಳಾದವು. ತೆಳ್ಳಗಾದ ತಗಡಿನ ಪರೆಯ ಮೇಲೆ ದಪ್ಪನಾದ ಮತ್ತು ಭಾರವಾದ ದೊಣ್ಣೆಯನ್ನು ತಲೆ ಸವರಲು ಎತ್ತಿ ಹಾಕಿ ಒತ್ತಿ ಎಳೆಯುವದರಿಂದ ಆ ಇಡೀ ಪಾತ್ರವು ಅಲ್ಲಾಡಿ ಅದಕ್ಕೆ ಹೆಚ್ಚಾದ ಧಾನ್ಯವು ಹಿಡಿಯುವದು ಸಾಧ್ಯವಾಗಿದೆ.

ಆದ್ದರಿಂದ ಇಗ ಜಾರಿಗೆ ತರಬೇಕೆಂದಿರುವ ಪರೆಯನ್ನು ಜಾರಿಗೆ ತರುವದರೊಂದಿಗೆಯೇ ಅದರ ತಲೆ ಸವರುವ ಕೋಲು ಸುಮಾರು 1½ ಅಡಿ ಉದ್ದ ¾ ಇಂಚು ದಪ್ಪ 4 ಇಂಚು ಅಗಲದ ಅಥವಾ ಸ್ವಲ್ಪ ಹೆಚ್ಚು ಕಮ್ಮಿಯ ಚಪ್ಪಟೆಯೂದ ಬಹಳ ಭಾರವಿಲ್ಲದ ಕೋಲನ್ನು ಉಪಯೋಗಿಸತಕ್ಕದ್ದಾಗಿ ಖಾನೂನು ಮಾಡಿದರೆ ಮಾತ್ರ ರೈತನಿಗೆ ಪರೆಯಿಂದಾಗುತ್ತಿರುವ ನಷ್ಟವು ಸಂಪೂರ್ಣವಾಗಿ ತಪ್ಪೀತೆಂದು ಧಾರಾಳವಾಗಿ ಹೇಳಬಹುದು. ಆದ್ದರಿಂದ ಸರ್ಕಾರದವರು ಒಡನೆಯೇ ಮೇಲೆ ಹೇಳಿದಂತೆ ಪರೆ ತಲೆ ಸವರಲು ಚಪ್ಪಟೆಯೂದ ಭಾರವಿಲ್ಲದ ಕೋಲನ್ನು ಉಪಯೋಗಿಸುವಂತೆ ಖಾನೂನು ಮಾಡಬೇಕಾಗಿ ಕೋರುವ.

ಐ. ಪಿ. ಮೂದಪ್ಪ.

ಕೌನ್ಸಿಲ್ ಮತ್ತು ಡಿ. ಬೋ. ಜುನಾವಣೆ.

ಕೌನ್ಸಿಲಿಗೂ ಡಿಸ್ಟ್ರಿಕ್ಟ್‌ಬೋರ್ಡಿಗೂ ಜುನಾವಣೆಗಳು ಜನವರಿ, ಫೆಬ್ರವರಿ, ಯೂ ಮೂರ್ಚಿ ತಿಂಗಳುಗಳಲ್ಲಿ ಈ ವರೆಗೆ ನಡೆಯುತ್ತಿತ್ತು. ಈ ವರ್ಷ ಇನ್ನೂ ಜುನಾವಣೆಯು ವರ್ತಮಾನವೇ ಇಲ್ಲ. ಜುನಾವಣೆಯು ಸೆಪ್ಟೆಂಬರ್ ಅಕ್ಟೋಬರ್ ತಿಂಗಳಿಗೆ ಹೋಗಬಹುದೆಂತ ಕೆಲವರು ಅಭಿಪ್ರಾಯಪಡುತ್ತಾರೆ. ಈ ರೀತಿ ಮುಂದರಿಸುವುದು ನನಗೆ ಯುಕ್ತವಾಗಿ ತೋರುವುದಿಲ್ಲ. ಮಾರ್ಚಿ ಏಪ್ರಿಲ್ ತಿಂಗಳುಗಳಲ್ಲಿ ಜನರಿಗೆ ವಿರಾಮವು ಎರುವ ಕಾಲ ಓಡ್ಯಾಟಕ್ಕೆ ಹೊಳೆ ಹಳ್ಳ, ಮಳೆ ಮೋಡಗಳ ಅಡಚಣೆ ಇಲ್ಲ. ಸರ್ಕಾರಕ್ಕೆ ಜುನಾವಣೆಯು ಕೆಲಸವನ್ನು ಈಗಲೇ ನಡಿಸಲು ಸಮಯವಿಲ್ಲವೇನು?

ದೇಶದ ಭವಿಷ್ಯತ್ತನ್ನು ತೀರ್ಮಾನಿಸಿಕೊಳ್ಳಬೇಕಾಗಿರುವ ಈಗಲೇ ಕೌನ್ಸಿಲ್ ಜುನಾವಣೆಯನ್ನು ಮಾಡಬೇಕಾಗಿತ್ತು. ದೇಶದವರ ಮುಂದೆ ಕೌನ್ಸಿಲ್ ಮೆಂಬರುತನಕ್ಕೆ ಉಮೇದುವಾರರಾಗಿ ನಿಲ್ಲುವವರು ದೇಶದ ಭವಿಷ್ಯತ್ತಿನ ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯವನ್ನು ಓಟರುಗಳಿಗೆ ತಿಳಿಸಿ ಜುನಾಯಿತರಾಗಿದ್ದ ಓಟರುಗಳ ಅಭಿಪ್ರಾಯವನ್ನು ಅಧಿಕಾರಿಗಳಿಗೆ ತಿಳಿಸಲು ಅನುಕೂಲವಿರುತ್ತಿತ್ತು. ಸರ್ವ ಪಕ್ಷ ಪರಿಷತ್ತು ಯಾತಕ್ಕೆ? ಕೌನ್ಸಿಲ್ ಜುನಾವಣೆಯನ್ನು ಈ ಸಮಸ್ಯೆಯನ್ನು ತೀರ್ಮಾನಿಸಿಕೊಳ್ಳಲಿಕ್ಕಾಗಿಯೇ ನಡಿಸಿ ಅಂಥಾ ಕೌನ್ಸಿಲಿನ ಅಭಿಪ್ರಾಯವನ್ನು ದೇಶದ ಅಭಿಪ್ರಾಯವನ್ನಾಗಿ ತೆಗೆದುಕೊಳ್ಳಬಹುದೆಂತ ಚೀಫ್ ಕಮಿಶನರೂ ಅಭಿಪ್ರಾಯವುಳ್ಳವರಾಗಿದ್ದಾರೆಂತ ಕೇಳಿದ್ದೇನೆ. ಹಾಗಿರುವಾಗ ದೇಶದ ಅಭಿಪ್ರಾಯವನ್ನು ಕೌನ್ಸಿಲ್ ಮೂಲಕ ತಿಳಿಯುವ ಬಗ್ಯೆ ಕೌನ್ಸಿಲ್ ಜುನಾವಣೆಯನ್ನು ತೀಘ್ರದಲ್ಲೇ ಮಾಡಬೇಕಾದದ್ದು ಸರ್ಕಾರದ ಕರ್ತವ್ಯವಲ್ಲವೇ?

ಡಿಸ್ಟ್ರಿಕ್ಟ್ ಬೋರ್ಡಿನ ಜುನಾವಣೆಯು ಇನ್ನೂ ತೀಘ್ರದಲ್ಲೇ ಆಗಬೇಕಾದ ಅವಶ್ಯವಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟ್‌ತನವು ಬಹಳ ಮುಖ್ಯ ಪದವಿಯೂಗಿದೆ. ಈ ಪದವಿಯನ್ನು ಚೀಫ್ ಕಮಿಶನರು ದಾನ ಮಾಡುವ ಹಕ್ಕನ್ನು ತನ್ನಲ್ಲಿ ಇಟ್ಟುಕೊಳ್ಳಲೇಕೂಡದು. ಅಧ್ಯಕ್ಷರನ್ನು ಜುನಾಯಿಸುವಹಕ್ಕು ಬೋರ್ಡು ಮೆಂಬರುಗಳಿಗೇನೇ ಬಿಡಬಹುದೆಂತಲೂ ರೂಲಿನಲ್ಲಿ ಇದೆಯೆಂತ ತಿಳಿದಿದೆ. ಹಾಗಿದ್ದರೆ ಜನರ ಅಭಿಲಾ

ಯು. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯಕಾಲದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತು ವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2–8–0. 3ಕ್ಕೆ ರೂ. 7–0–0.

೨. ಅಶೋಕಾರಿಷ್ಟ, ಮತ್ತು ಮೂತ್ರೆ—ಹೆಂಗಸರ ಮುಟ್ಟಿದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. ಮೇಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0.

(52—16)

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ
ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿಡಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲು ಸ್ಥಾಪಿತವಾಗಿ ಈ ವರೆಗೆ 27000 ರೂಪಿಂಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ಪುತಸಂಪಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿಯವರೂ, ಕೋಮುವಾರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮೊತ್ತ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—12 ನಾಪೋಕ್ಲು, (ಕೊಡಗು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪೆನಿ ಔಷಧ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಒರುವ ಜ್ವರ, ಮೆಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧ ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—22) ಮತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮಾಶಾಯಿ 31% ಮಾತ್ರ.

ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಸರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—7)

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/– Assured on Whole Life Assurances.

and

Rs. 14 per annum per Rs. 1000/– Assured on Endowment Assurances

Head Office:—
EMPIRE OF INDIA LIFE BUILDING,
Bombay

Branch Office:—
152/3, COMMERCIAL STREET,
Bangalore.

52—15

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್ ಲಿಮಿಟೆಡ್ ಕೂ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,950— 0—0
ಜಮೂಬಂದ ಠೇವಣಾತಿ	—	22,8525—10—8
ವಸೂಲಾದ ಕ್ಷೇಮನಿಧಿ	—	48,840— 3—0

ಈ ಬ್ಯಾಂಕಿನಿಂದ ಕೊಡಗು ಠೇಕಡ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟಮಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಟ್ರೆಜರರ್,
ಮನೆಯಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಮನೆಯಪಂಡ ಯಂ. ಬೆಳ್ಯಪ್ಪನವರು.

ಕಾರೇಕು 1—1—1933.

ನೋಟೀಸು.

ಈ ಕಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಶಿಕ್ಕರ ಕೊಡಗಿಗೆ ಹೆ॥ ಚೌರಿರ ಮೂದ್ಯೆಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು,

ಮಕ್ಕು, ಅಠಮಣಮೂಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೊದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವತಿ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮುಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ಸರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವನವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22½ರಕ್ಕಿಂತ ಎಂದೂ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟ [52—46

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—1 ಗಿರಿಗಾಂವ, ಮುಂಬಯಿ.

ಕಾರ್ಡ್ ಬರೆದರೆ ತಗಿನ ಕ್ಯಾಟಲಾಗು ವಂಪಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ಕೋಟುಗಳು, ಶೇಪ್ಪುಗಳು, ಮದ್ದು ಮತ್ತು! ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—19 **210 Abdul Rehiman Street, BOMBAY.**

Printed & published by M. M. Ganapathi at "Kodagu" Press, Mercara for "Kodagu" Ltd.,